ಸಭೆಯು ಒಪ್ಪಿಗೆ ಸೂಚಿಸಿತು

ಅಧ್ಯಕ್ಷರು: ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

ಅಧ್ಯಕ್ಷರು: ನಾಲ್ಕು ಜನ ಸದಸ್ಯರು ವಿಷಯವೊಂದನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ನೋಟೀಸ್ ಅನ್ನು ಕೊಟ್ಟಿರುತ್ತೀರಿ. ನಾನು ಅದಕ್ಕೆ ನನ್ನ ಒಪ್ಪಿಗೆಯನ್ನು ನೀಡಿರುವುದಿಲ್ಲ. ಆದರೆ ಅದರ ಬಗ್ಗೆ ತಾವು ಪ್ರಲಿಮಿನರಿ ಸಬ್ ಮಿಷನ್ ಅನ್ನು ಮಾಡಬಹುದು. ಒಬ್ಬೊಬ್ಬರು ನಾಲ್ಕೈದು ನಿಮಿಷ ತೆಗೆದುಕೊಂಡು ಅದರ ಬಗ್ಗೆ ಮಾತನಾಡಬಹುದು.

3. ನಿಲುವಳಿ ಸೂಚನೆ ಅನುಮತಿ ಕೋರಿ ಚರ್ಚೆ

ಅ) ಬೆಂಗಳೂರು ಪ್ರಾಧಿಕಾರ ಮಸೂದೆಗೆ ತಿದ್ದುಪಡಿಯನ್ನು ತಂದು ಅಕ್ರಮವಾಗಿ ಕಟ್ಟಿದ ಕೆಲವು ಮನೆಗಳನ್ನು ರೆಗ್ಯುಲರೈಸ್ ಮಾಡುವ ಕುರಿತು

ಶ್ರೀ ಎಸ್.ಸುರೇಶ್ ಕುಮಾರ್ : ಮೊದಲನೇ ಮತ್ತು ಎರಡನೇ ವಿಷಯ ತೆಗೆದುಕೊಂಡರೆ ಬಹಳ ಅನುಕೂಲವಾಗುತ್ತದೆ. ನಿಮ್ಮ ಕಛೇರಿ ಪ್ರಾರಂಭವಾಗುವಾಗಿ 9.35ಕ್ಕೆ ನಾನು ತಂದು ಕೊಟ್ಟಿದ್ದೇನೆ. ಮಾನ್ಯ ಸಿಂಧ್ಯಾರವರು ಹಿರಿಯ ಸದಸ್ಯರು ಅವರಿಗೆ ಅವಕಾಶ ಮಾಡಿಕೊಡಿ. ನಾಲ್ಕೈದು ನಿಮಿಷ ಎಂದು ನಿಗದಿ ಮಾಡಿದರೆ ಹೇಗೆ? ಈ ಖಾತೆಯ ಜವಾಬ್ದಾರಿ ಹೊತ್ತಿರುವಂತಹ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ಇದು ನಿಲುವಳಿ ಸೂಚನೆ ಆಗಬೇಕೆಂದು ನಮ್ಮ ಪ್ರಿಸ್ಟಿಜ್ ಪ್ರಶ್ನೆ ಅಲ್ಲ. ಆಗುತ್ತಿರತಕ್ಕಂತಹ ವಿಷಯವನ್ನು ತಮ್ಮ ಮೂಲಕ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟು ಸರ್ಕಾರ ಮಾನವೀಯ ನಿಲುವು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ನಿಲುವಳಿ ಸೂಚನೆ ತಂದಿರುವುದರಿಂದ ನಾವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇರುವ ವಿಚಾರವನ್ನು ಸಂಪೂರ್ಣವಾಗಿ ಸಭೆಯ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಒಂದು ವಿಚಾರವನ್ನು ಈ ಸದನದಲ್ಲಿ ವ್ಯಾಪಕವಾಗಿ ಚರ್ಚೆಯಾಗಬೇಕೆಂಬ ಉದ್ದೇಶದಿಂದ ತೆಗೆದುಕೊಂಡು ಬಂದಿದ್ದೇವೆ. ಸುಮಾರು ಒಂದು ವರ್ಷದ ಹಿಂದೆ ಇದೇ ಸದನದಲ್ಲಿ ಈ ವಿಚಾರದಲ್ಲಿ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಆ ಕಡೆ ಕುಳಿತಿರತಕ್ಕಂತಹ ಶ್ರೀ ಮಾನ್ ಖರ್ಗೆಯವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಕುಳಿತಂಥ ಸಂದರ್ಭದಲಲಿ ಬಹಳ ಸುದೀರ್ಘವಾಗಿ ಮಾತನಾಡಿದ್ದರು. ಸುಮಾರು ಒಂದೂವರೆ ವರ್ಷಗಳ ಹಿಂದೆ ಈ ಸದನದಲ್ಲಿ ಒಂದು ಕಾನೂನು ಮಾಡಿದ್ದೇವೆ. ಆ ಕಾನೂನಿನಲ್ಲಿ 1976ರಲ್ಲಿ ಮಾಡಿದ ಬೆಂಗಳೂರು ಪ್ರಾಧಿಕಾರದ ಮಸೂದೆಗೆ ತಿದ್ದುಪಡಿಯನ್ನು ತಂದು ಈ ಅಕ್ರಮವಾಗಿ ಕಟ್ಟಿದ ಕೆಲವು ಮನೆಗಳೇನಿವೆ, ಅವುಗಳನ್ನು ರೆಗ್ಯಲರೈಸ್ ಮಾಡುವ ದೃಷ್ಟಿಯಿಂದ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. 1976ರ ಬಿಡಿಎ ಆ್ಯಕ್ಟ್ ಏನಿದೆ ಆದರಲ್ಲಿ 38 'ಸಿ'ಗೆ ಅಮೆಂಡ್‌ಮೆಂಟ್ ತಂದು ಅದರಲ್ಲಿ ಸ್ಟ್ರಕ್ಚರ್ ಮತ್ತು ಸೈಟ್ ಎರಡನ್ನೂ ಸೇರಿಸಬೇಕೆಂದು, ಸರ್ಕಾರಕ್ಕೆ ಇದರಿಂದ ಬಿಡಿಎನವರು ಸ್ವಲ್ಪ ಹಣವನ್ನು ಕಟ್ಟಿ ರೆಗ್ಯಲರೈಸ್ ಮಾಡಬೆಕೆನ್ನುವ ದೃಷ್ಟಿಯಿಂದ

ಈ ಮಸೂದೆಯನ್ನು ಮಾಡಿದೆವು. ಇದು ಆದಮೇಲೆ ಈ ಎರಡೂ ಸದನಗಳೂ ಇದಕ್ಕೆ ಮಂಜೂರಾತಿ ಕೊಟ್ಟ ಮೇಲೆ ರಾಜ್ಯಪಾಲರೂ ಸಹಿತ ಇದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರೂ ಇದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರು ಇದಕ್ಕೆ ಮಂಜೂರಾತಿ ಕೊಟ್ಟಮೇಲೆ ಸರ್ಕಾರ ಮುಂದೆ ಇದಕ್ಕೆ ಬೇಕಾಗಿರತಕ್ಕಂತಹ ರೂಲ್ಸ್ ಫ್ರೇಮ್‌ಮಾಡಿ, ಟೈಮ್ ಫಿಕ್ಸ್ ಮಾಡಿ, ಇವತ್ತಿನಿಂದ ಇದು ಎಫೆಕ್ಟ್‌ಗೆ ಬರುತ್ತದೆ ಎಂದು ಇದೆ. ಈ ಮಧ್ಯದಲ್ಲಿ ನಾವು ಯಾರೂ ಸಹಿತ ಬಿಡಿಎ ಪ್ರಾಪರ್ಟಿ ಇರಬಹುದು, ಕಾರ್ಪೋರೇಷನ್ ಪ್ರಾಪರ್ಟಿ ಇರಬಹುದು, ಅಥವಾ ಸರ್ಕಾರಕ್ಕೆ ಹಾಗೂ ಇತರೇ ಸಂಸ್ಥೆಗಳಿಗೆ ಸಂಬಂಧಪಟ್ಟ ಆಸ್ತಿ ಇರಬಹುದು. ಆಸ್ತಿಯನ್ನು ಅಕ್ರಮವಾಗಿ ಗಳಿಸಿರತಕ್ಕಂಥದ್ದನ್ನು ವಶಪಡಿಸಿಕೊಳ್ಳಬೇಕೆಂಬುದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಅದನ್ನುನಾವು ಟೀಕೆ ಮಾಡುವುದಕ್ಕೆ ಹೋಡುವುದಿಲ್ಲ. ಸಿ.ಎ. ಸೈಟ್ ಇದೆ , ಪಾರ್ಕ್‌ಗಳಿವೆ, ಈ ತರಹ ಅಕ್ರಮವಾಗಿ ಮಾಡಿರುವುದನ್ನು ಸರ್ಕಾರ ತೆಗೆದುಕೊಳ್ಳುವುದರ ಕ್ರಮದ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಮುಖ್ಯ ಮಂತ್ರಿಗಳು ಎರಡು-ಮೂರು ತಿಂಗಳ ಹಿಂದೆ ಸಜ್ಜನರಾವ್ ಸರ್ಕಲ್‌ನಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗಿದ್ದರು. ಅಲ್ಲಿ ಶನೇಶ್ವರ ದೇವಸ್ಥಾನವನ್ನು ಕಟ್ಟಿದ್ದಾರೆ. ಆ ಶನೇಶ್ವರ ದೇವಸ್ಥಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಹಿಂದೆ ಪಾರ್ಕ್ ಎಷ್ಟು ಚೆನ್ನಾಗಿ ಇತ್ತು, ಈಗ ಯಾವ ಸ್ಥಿತಿಗೆ ಬಂದಿದೆ ಎಂದು ಅಭಿಪ್ರಾಯ ವ್ಯಕ್ತಮಾಡಿದ್ದು ನನಗೆ ಜ್ಞಾಪಕ ಇದೆ. ಆದ್ದರಿಂದ, ಈ ಪಾರ್ಕ್‌ಗಳನ್ನು ಆಕ್ರಮಣ ಮಾಡಿ ಕೊಂಡಿರುವುದು ಮತ್ತು ಸಿ.ಎ. ಸೈಟ್‌ಗಳನ್ನು ಆಕ್ರಮಣ ಮಾಡಿರುವುದು ತಪ್ಪು, ಅದನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು. ಆದರೆ ಯಾವುದೇ ಕಾನೂನು ಮಾಡಿದಾಗ ಲೋಪದೋಷಗಳು ಇದ್ದೇ ಇರುತ್ತವೆ. ಯಾವುದೂ ಶ್ರೇಷ್ಠವೆಂದು ಹೇಳುವುದಿಲ್ಲ. ನಮ್ಮ ಪವಿತ್ರವಾದ ಸಂವಿಧಾನಕ್ಕೆ ನಾವು 70 ಸಾರಿ ಬದಲಾವಣೆಗಳನ್ನು ತಂದಿದ್ದೇವೆ. ಆದ್ದರಿಂದ ಯಾವುದೇ ಒಂದು ಮಸೂದೆ ಆದತಕ್ಷಣ ಇದು ಸರ್ವ ಶ್ರೇಷ್ಠವಾದುದು ಎಲ್ಲ ಗುಣಗಳು ಅದರಲ್ಲಿ ಇವೆ, ಎಲ್ಲರಿಗೂ ರಕ್ಷಣೆ ಕೊಡುತ್ತದೆ ಎಂದು ನಾನು ಹೇಳುವುದಿಲ್ಲ. ಯಾವುದೇ ಒಂದು ಕಾನೂನನ್ನು ಕಾರ್ಯಾಚರಣೆಗೆ ತರತಕ್ಕಂತಹ ಸಂದರ್ಭದಲ್ಲಿ ಬಡವರಿಗೆ, ಸಾಮಾನ್ಯ ಜನಗಳಿಗೆ ತೊಂದರೆಯಾಗದ ಹಾಗೆ ಮಾಡುವುದು ಸರ್ಕಾರದ ಕರ್ತವ್ಯ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬಹಳ ಮುಖ್ಯವಾಗಿ ಕೇಳ ಬಯಸುವುದು., ಈ ಮಸೂದೆಯನ್ನು ಏನು ಮಾಡಿದ್ದೇವೆ, ಈ ಸದನದಲ್ಲಿ ಮತ್ತು ಆ ಸದನದಲ್ಲಿ ಅದರ ಒಪ್ಪಿಗೆ ಪಡೆದು ರಾಜ್ಯಪಾಲರ ಮತ್ತುರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆದನಂತರ ಈ ಕಾನೂನಿನ ಪರಿಸ್ಥಿತಿ ಏನು? ಇದನ್ನು ಜಾರಿಗೆ ತರುತ್ತಿರಾ ಇಲ್ಲ. ಅದರ ಕಟ್ ಆಫ್ ಡೇಟ್ ಫಿಕ್ಸ್ ಮಾಡಿ ರೂಲ್ಸ್ ಫ್ರೇಮ್ ಮಾಡಿ ಯಾವತ್ತಿನಿಂದ ನೀವು ಕಾರ್ಯಾಚರಣೆಗೆ ತರುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಖಚಿತವಾದ ಮಾಹಿತಿ ನನ್ನ ಹತ್ತಿರ ಇಲ್ಲ. ನನಗೆ ತಿಳುವಳಿಕೆ ಇರುವ ಪ್ರಕಾರ ಸುಮಾರು 10,000 ಮನೆಗಳನ್ನು ಈ ರೀತಿ ಕೆಲವರು ಸಕ್ರಮವಾಗಿ ಕಟ್ಟಿರಬಹುದು, ಕೆಲವರು ಅಕ್ರಮವಾಗಿ ಕಟ್ಟಿರಬಹುದು. ಕಟ್ಟಿರತಕ್ಕಂತಹ ಬಿಲ್ಡಿಂಗ್‌ನ್ನು ಡೆಮಾಲಿಷ್ ಮಾಡುವುದಕ್ಕೆ ಬಿಡಿಎನವರು ಪ್ರಯತ್ನ ಮಾಡುತ್ತಿರುವುದು ನಿಜವಾದ ಸಂಗತಿ. ಕಳೆದ ಒಂದು ತಿಂಗಳಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ನಗರದ ಸುತ್ತಮುತ್ತ ಇರುವ ಅನೇಕ ಬಡಾವಣೆಗಳಲ್ಲಿ ಜನರು ಭಯಗ್ರಸ್ತರಾಗಿರುವುದು ತಮ್ಮ ಗಮನಕ್ಕೆ ಬಂದಿರಬಹುದು. ಮಾನ್ಯ ಅಧ್ಯಕ್ಷರೆ, ನಾನು ಕೆಲವು ಫೋಟೋಗಳನ್ನು ತಮ್ಮ ಮುಂದೆ ಕಳುಹಿಸುತ್ತಿದ್ದೇನೆ. ಈ ಎಲ್ಲ ಬಿಲ್ಡಿಂಗ್‌ಗಳು ಸಹಿತ

ಸುಮಾರು 15 ರಿಂದ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದಾರೆ. ಈಗ ಅವರ ಮೇಲೆ ತೂಗು ಕತ್ತಿಯನ್ನು ನಿಲ್ಲಿಸಿ ಅದನ್ನೆಲ್ಲಾ ಡೆಮಾಲಿಶ್ ಮಾಡುತ್ತೇವೆಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು? ಕೆಲವು ಜನ ಸರ್ಕಾರಿ ನೌಕರರು ಇರಬಹುದು, ಮಧ್ಯಮ ವರ್ಗದ ಕುಟುಂಬದವರು ಇರಬಹುದು, ಬಡವರು ಇರಬಹುದು, ಪಕ್ಕಾ ಮನೆಗಳನ್ನು ಆರ್.ಸಿ.ಸಿ ಸ್ಟ್ರಕ್ಚರ್‌ನಲ್ಲಿ ಕಟ್ಟಿದ್ದಾರೆ. ನಾವು ಹೋಗಿ ಒಂದೇ ಸಾರಿ ಈ ಮನೆಗಳನ್ನು ಕೆಡವುತ್ತೇವೆ ಎಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು? ಅವರು ಬೀದಿ ಪಾಲಾಗುತ್ತಾರೆ. ನಾವೂ 10-12 ವರ್ಷಗಳ ಕಾಲ ಆಡಳಿತ ನಡೆಸಿದ್ದೇವೆ. 1976ರಿಂದ ನಾವೆಲ್ಲರೂ ಸಹಿತ ಅಧಿಕಾರವನ್ನು ಹೊತ್ತುಕೊಂಡು ಬಂದಿದ್ದೇವೆ. ಒಂದು ಸೈಟಿಗೆ ಕಾರ್ಪೊರೇಷನ್‌ನವರು ಸರ್ಟಿಫಿಕೇಟ್ ಇಶ್ಯೂ ಮಾಡಿದ್ದಾರೆ. ಲೇಔಟ್ ಬೆಟರ್‌ಮೆಂಟ್ ಛಾರ್ಜಸ್ ಕಲೆಕ್ಟ್ ಮಾಡಿಕೊಂಡಿದ್ದಾರೆ. ಪ್ರಾಪರ್ಟಿ ಟ್ಯಾಕ್ಸನ್ನು 1995 ರಿಂದ 2000ನೇ ಇಸವಿಯವರೆಗೆ ಕಲೆಕ್ಟ್ ಮಾಡಿದ್ದಾರೆ. ವಾಟರ್ ಸಪ್ಲೈ ರಿ ಡ್ರೈನೇಜ್ ಬೋರ್ಡ್‌ಕನೆಕ್ಷನ್ ಕೊಟ್ಟಿದ್ದಾರೆ. ಬೆಂಗಳೂರು ಕಾರ್ಪೊರೇಷನ್‌ರವರು ಬಿಲ್ಡಿಂಗ್ ಪ್ಲ್ಯಾನನ್ನು ಅಪ್ರೂವ್ ಮಾಡಿದ್ದಾರೆ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ವಿದ್ಯುತ್ ಕನೆಕ್ಷನ್ ಕೊಟ್ಟಿದ್ದಾರೆ. ರೋಡ್‌ಗಳನ್ನು ಮಾಡಿದ್ದಾರೆ. ಮರಗಳನ್ನು ನೆಟ್ಟು ಬೆಳೆಸಿದ್ದಾರೆ. ಅವರೆಲ್ಲ ಬೋನ್‌ಫೈಡ್ ಓಟರ್ಸ್ ಇದ್ದಾರೆ.; ಅವರಿಗೆಲ್ಲಾ ರೇಷನ್ ಕಾರ್ಡ್‌ಗಳಿವೆ. ಇಂತಹ ಮನೆಗಳನ್ನು ಉರುಳಿಸುವುದಕ್ಕೆ ಹೋದರೆ ಅವರು ಎಲ್ಲಿಗೆ ಹೋಗಬೇಕು. ಇದು ಬಹಳ ಮುಖ್ಯವಾದ ವಿಚಾರ.

ಅಧ್ಯಕ್ಷರು : ಇದರಲ್ಲಿ ಯಾವುದೂ ಡೆಮಾಲಿಷ್ ಮಾಡಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಡೆಮಾಲಿಷ್ ಮಾಡಬೇಕೆಂದು ಹೋಗಿದ್ದರು. ಅದಕ್ಕೋಸ್ಕರ ಅದಕ್ಕೆ ಸಂಬಂಧಪಟ್ಟ ರೆಸಿಡೆಂಟ್ಸ್ ನನಗೆ ರೆಪ್ರಸೆಂಟೇಷನ್ ಕೊಟ್ಟಿದ್ದಾರೆ. ಇಂತಹ ಮನೆಗಳನ್ನು ಡೆಮಾಲಿಷ್ ಮಾಡುವುದಕ್ಕೆ ಹೋಗಿದ್ದರು ಎಂದು ತೋರಿಸುವುದಕ್ಕೆ, ಸರ್ಕಾರದ ಗಮನಕ್ಕೆ ತರುವುದಕ್ಕೆ ಇದನ್ನು ನಾನು ತಂದಿದ್ದೇನೆ. ಯಾವುದೇ ನೋಟೀಸ್ ಕೊಟ್ಟಿಲ್ಲ. ಇದರ ಜೊತೆಗೆ ಬಿ.ಡಿ.ಎ.ನವರು ನೋಟಿಫೈ ಮಾಡಿ 23 ವರ್ಷಗಳು ಆಗಿವೆ. 1977ರಲ್ಲಿ ನೋಟಿಫೈ ಮಾಡಿರುವುದು. 1977ರಲ್ಲಿ ನೋಟಿಫೈ ಮಾತಿರತಕ್ಕಂಥದ್ದನ್ನು ಇದುವರೆಗೆ ನಾವು ತೆಗೆದುಕೊಳ್ಳುವುದಕ್ಕೆ ಆಗಿರಲಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ನಾವು ಆಡಳಿತದಲ್ಲಿದ್ದ ಸಂದರ್ಭದಲ್ಲಿ ನಾವು ಈ ರೀತಿ ಮಾಡಿರತಕ್ಕಂಥದ್ದನ್ನು ಸಕ್ರಮಗೊಳಿಸಬೇಕೆಂದು ಮಾಡಿರುವಂಥದ್ದರು, ಈಗ ಆ ಕಾನೂನಿನ ಪರಿಸ್ಥಿತಿ ಏನು? ಅದನ್ನು ಬಿಟ್ಟು ಒಂದೇ ಸಾರಿ ವಿರೋಧಿಸುವುದಕ್ಕೆ ಹೋಗಿರುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಸ್ವಚ್ಛವಾಗಿಡಬೇಕು, ಸುಂದರವಾಗಿಡಬೇಕು, ಇಲ್ಲಿ ಇರತಕ್ಕಂತಹ ಏರಿಯಾಗಳಲ್ಲಿ ಸರ್ಕಾರದ ಪ್ರಾಪರ್ಟಿ ಯಾರು ಕಬಳಿಸಿದ್ದಾರೆ, ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ ಅದರ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇಲ್ಲ. ಮಾನ್ಯ ಅಧ್ಯಕ್ಷರೆ ಕಾರ್ಪೊರೇಷನ್‌ನಲ್ಲಿ ಇರತಕ್ಕಂತಹ ಕೆಲವರು ಶಾಮೀಲಾಗಿ ಅವುಗಳನ್ನು ರೆಕಾರ್ಡ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಾವು ಗಮನಿಸಬೇಕು. ಯಾರೇ ಮಂತ್ರಿಗಳಾಗಿರಲಿ, ಯಾವುದೇ ಸರ್ಕಾರ ಇರಲಿ, ಇವರೆಲ್ಲಾ ಶಾಮೀಲಾಗಿ ಮಾಡಿದ್ದಾರೆ. ಈಗ ಅದನ್ನು ಡೆಮಾಲಿಶ್ ಮಾಡಿದ್ದಾರೆ. It is a criminal waste of the national property. ಆದ್ದರಿಂದಾಗಿ ಇನ್ನೂ ಬಹಳಷ್ಟು ವಿಚಾರಗಳನ್ನು ಬೆಂಗಳೂರು

ನಗರದ ಶಾಸಕರು ಹೇಳುವವರಿದ್ದಾರೆ, ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ನಾವು ಪಾಸ್ ಮಾಡಿರತಕ್ಕಂತಃಹ ಆರ್ಡ್‌ನ ಪೊಸಿಷನ್ ಏನು? ಎಂದು ಕೇಳುತ್ತಿದ್ದೇನೆ. ನೀವು ಸುಮಾರು ಹತ್ತು ಸಾವಿರ ಮನೆಗಳನ್ನು ಕೆಡವಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ.

12. 10 ಪಿ.ಎಂ.

ಇವುಗಳನ್ನು ರೆಗ್ಯಲರೈಸ್ ಮಾಡುವುದರಿಂದ ಬಿ. ಡಿ. ಎ. ಗೂ ಅನುಕೂಲ ಆಗುತ್ತದೆ ಮತ್ತು ಅಲ್ಲಿರತಕ್ಕಂಥ ಜನಗಳಿಗೂ ಅನುಕೂಲವಾಗುತ್ತದೆಯಾದ್ದರಿಂದ ಅವುಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇವೊತ್ತು ನಿಲುವಳಿ ಸೂಚನೆ ತಂದಿರುವ ಕಾರಣವೆಂದರೆ ಇಂದಿನ ನಿಮ್ಮ ಕಾರ್ಯಾಚರಣೆಯಿಂದ ಬೆಂಗಳೂರಿನ ಸುತ್ತಮುತ್ತಲಿರುವ ಎಲ್ಲಾ ಮನೆಗಳ ಜನರು ಬಹಳ ಭಯಭೀತರಾಗಿದ್ದಾರೆ. ಜನರು ತಮ್ಮ ಜೀವನದ ಎಲ್ಲಾ ವರಮಾನವನ್ನು ಕೂಡಿ ಹಾಕಿ ಖರ್ಚುಮಾಡಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಇವರಲ್ಲಿ ಸರ್ಕಾರಿ ನೌಕರರು ಹಾಗೂ ಮಧ್ಯಮ ವರ್ಗದವರು ಇದ್ದಾರೆ. ಇನ್ನು ಕೆಲವರು ಇದರಲ್ಲಿ ನೆಲಗಳ್ಳರು ಇದ್ದಾರೆ. ಇಂಥವರ ಮೇಲೆ ಬಿ. ಡಿ. ಎ. ಹಾಗೂ ನಗರಪಾಲಿಕೆಗಳು ತೆಗೆದುಕೊಳ್ಳುವ ಕ್ರಮಕ್ಕೆ ನಮ್ಮ ಸಹಕಾರ ಇದೆ. ಇಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದೇ ನಾವು ಒತ್ತಾಯವನ್ನು ಮಾಡುತ್ತೇವೆ. ಆದರೆ ಇಂಥ ಕಾರ್ಯಾಚರಣೆಯನ್ನು ಮಾಡುವ ಸಮಯದಲ್ಲಿ ಬಡವರು ಹಾಗೂ ಮಧ್ಯಮ ವರ್ಗದವರು ಯಾರ್‍ಯಾರು ಪಕ್ಕಾ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟುಕೊಂಡಿರುತ್ತಾರೋ ಅಂಥವರ ಮನೆಗಳನ್ನು ಕೂಡ ಡೆಮಾಲಿಶ್ ಮಾಡುವುದರಲ್ಲಿ ಅರ್ಥವಿರುವುದಿಲ್ಲ. ಇಂಥ ಕಾರ್ಯಾಚರಣೆಯನ್ನು ತಕ್ಷಣದಲ್ಲಿಯೇ ನಿಲ್ಲಿಸಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಇವೊತ್ತು ನಿಲುವಳಿ ಸೂಚನೆ ಮೂಲಕ ತಮ್ಮ ಮನವೊಲಿಸಿ ಸರ್ಕಾರದ ಗಮನಕ್ಕೆ ಕೆಲವೊಂದು ಅಂಶಗಳನ್ನು ತರಬೇಕೆಂದು ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಸಿಂಧ್ಯಾರವರು ಮಾತನಾಡಿ ಕೆಲವೊಂದು ವಿಷಯಗಳನ್ನು ಹೇಳಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಏನಿದೆ ಇದು ಕಳೆದ ಹದಿನೈದು-ಇಪ್ಪತ್ತು ದಿವಸಗಳಿಂದ ಬೆಂಗಳೂರಿನ ಸುತ್ತಮುತ್ತ ಮನೆಗಳನ್ನು ಕೆಡವಲು ಪ್ರಾರಂಭ ಮಾಡಿ ಬೆಂಗಳೂರು ಡೆಮಾಲಿಶ್ ಅಥಾರಿಟಿ ಎಂಬಂತೆ ಕಾರ್ಯಾಚರಣೆಯನ್ನು ನಡೆಸುತ್ತಿದೆ. ಈಗಾಗಲೇ ಸಿಂಧ್ಯಾರವರು ಹೇಳಿದ ಹಾಗೆ ನಾವ್ಯಾರು ಕೂಡ ನೆಲಗಳ್ಳರ ಪರವಾಗಿ ವಕಾಲತ್ತನ್ನು ವಹಿಸಲು ಇಲ್ಲಿಗೆ ಬಂದಿಲ್ಲ. ಆದರೆ ಬಡವರು ಹಾಗೂ ಮಧ್ಯಮ ವರ್ಗದವರು ತಮ್ಮ ಜೀವನದ ಗಳಿಕೆಯಿಂದ ಮನೆಗಳನ್ನು ಏನು ಕಟ್ಟಿಕೊಂಡಿದ್ದಾರೆ. ಅವರ ಬಗ್ಗೆ ಈ ಸದನದಲ್ಲಿ ಕೆಲವೊಂದು ವಿಚಾರಗಳನ್ನು ಹೇಳಲು ಇಷ್ಟಪಡುತ್ತೇನೆ. ಇಂದು ಬಿ. ಡಿ. ಎ. ನವರು ಏನು ಕಾಯಾರಚರಣೆಯನ್ನು ಮಾಡುತ್ತಿದ್ದಾರೆ ಇದಕ್ಕೆ ಕಾರಣ ಬಹುಶಃ ಕಳೆದ ಹತ್ತಾರು ವರ್ಷಗಳ ಇವರ ಆಡಳಿತದಲ್ಲಿ ಇರತಕ್ಕ ಹುಳುಕುಗಳನ್ನು ಮುಚ್ಚಿಹಾಕಲು ನಡೆಸುತ್ತಿರುವ ಪ್ರಯತ್ನವೇ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚೆಗೆ ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ ಎಂದು ಆಯಿತು. ಅಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸಭಿಕರಾಗಿ ಕುಳಿತಿದ್ದರು. ಅಂದು ಬೇರೆ ಬೇರೆ ಇಲಾಖೆಯವರು ತಮ್ಮ

ಅಜೆಂಡಾವನ್ನು ಇಟ್ಟರು. ಅದರಲ್ಲಿ ಬಿ.ಡಿ.ಎ. ಕೂಡ ಒಂದು ಅಜೆಂಡಾ ಇಟ್ಟು ಜೂನ್ 30ರೊಳಗೆ 10ಸಾವಿರ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದೆ. ಯಾವ ಯಾವ ಮನೆಗಳು ಪಕ್ಕಾ ಮನೆಗಳಾಗಿವೆ ಅಂಥವುಗಳನ್ನು ಒಂದು 10 ಸಾವಿರ ನಿವೇಶನಗಳನ್ನು ಕೊಡುತ್ತೇವೆಂದರೆ ಅದು ಯಾವ ರೀತಿಯ ನ್ಯಾಯ? ಈ ಆಜೆಂಡಾವನ್ನು ನೆರವೇರಿಸುವುದಕ್ಕೋಸ್ಕರ ಕಳೆದ 15 ದಿವಸಗಳಿಂದ ಬಿ.ಡಿ.ಎ. ದವರು ಜೆ.ಸಿ.ಬಿ. ಬುಲ್‌ಡೋಜರ್‌ಗಳನ್ನು ತೆಗೆದುಕೊಂಡು ಹೋಗಿ ಮತ್ತು ಪೊಲೀಸ್‌ರನ್ನು ಕರೆದುಕೊಂಡು ಹೋಗಿ ಮನೆ ಕಟ್ಟಿಕೊಂಡಿರುವ ಜನಸಾಮಾನ್ಯರಿಗೆ ಭಯ ಭೀತರಾಗುವಂತೆ ಮಾಡಿದರೆ ಇದು ಯಾವುದೇ ಸರ್ಕಾರಕ್ಕಾಗಲಿ ಅಥವಾ ಯಾವುದೇ ಇಲಾಖೆಗಾಗಲಿ ಶೋಭೆ ತರತಕ್ಕಂಥ ಕೆಲವಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ವರ್ಷದ ಹಿಂದೆ ಬಿ.ಡಿ.ಎ. ಮಂತ್ರಿಗಳಾಗಿದ್ದ ಮಾನ್ಯ ಸೋಮಣ್ಣನವರು ಈಗ ತಮ್ಮ ಪಕ್ಷಕ್ಕೆ ಸೇರಿದ್ದಾರೆ. ಅವರು ಅಂದು ಬಿ.ಡಿ.ಎ.ಯ 38(ಸಿ) ಕಾಯಿದೆಗೆ ತಿದ್ದುಪಡಿಯನ್ನು ತಂದರು. ಯಾವ ರೀತಿ ತಂದರು ಎಂಬುದಕ್ಕೆ ಮುಖ್ಯಮಂತ್ರಿಗಳಾಗಿರುವ ಎಸ್.ಎಂ.ಕೃಷ್ಣಾರವರು ತಮ್ಮ ಪಕ್ಕದಲ್ಲಿ ಕುಳಿತುಕೊಳ್ಳುವ ಖರ್ಗೆಯವರನ್ನು ಕೇಳಬೇಕು. He moved heaven and earth. ಜಯಚಂದ್ರಾರವರು, ಖರ್ಗೆಯವರು ಮುದ್ದಹನುಮೇಗೌಡರು ಮತ್ತು ನಾನು ಮತ್ತು ಇನ್ನಿತರರು ಸೇರಿಕೊಂಡು 38ಸಿ ಫಿಲಾಸಫಿ ಬಗ್ಗೆ ಪ್ರಶ್ನೆಯನ್ನು ಮಾಡಿದ್ದೆವು. ಏತಕ್ಕಾಗಿ ತರಾತುರಿಯಿಂದ ಅಮೆಂಡ್‌ಮೆಂಟ್ ತರುತ್ತಿದ್ದೀರೆಂದು ಕೇಳಿದ್ದೆವು. ಈ ವಿಚಾರದಲ್ಲಿ ಅಂದು ಏನೆಲ್ಲಾ ಆರ್ಗ್ಯೂಮೆಂಟ್ ಮಾಡಿ ಈ ಸದನ ಹಾಗೂ ವಿದಾನ ಪರಿಷತ್‌ನಲ್ಲಿ ಅನುಮೋದನೆ ದೊರೆತ ನಂತರ ರಾಜ್ಯಪಾಲರ ಅನುಮೋದನೆಗೆ ಹೋಯಿತು. ರಾಜ್ಯಪಾಲರು ಅಮೆಂಡ್‌ಮೆಂಟ್ ಬಗ್ಗೆ ನನಗೇಕೋ ಸಮಾಧಾನವಾಗಿಲ್ಲವೆಂದು ಹೇಳಿ ಮೂರು ಬಾರಿ ವಾಪಸ್ಸು ಕಳುಹಿಸಿದ್ದರು. ಇದಕ್ಕೆ ಮತ್ತೆ ರಾಜ್ಯಪಾಲರು ಅನುಮೋದನೆಯನ್ನು ಕೊಟ್ಟು ರಾಷ್ಟ್ರಾಧ್ಯಕ್ಷರ ಅಂಕಿತ ಕೂಡ ದೊರೆತು ದಿನಾಂಕ 5-1-2000ದ ಗೆಜೆಟ್‌ನಲ್ಲಿ 38 ಸಿ ಅಮೆಂಡ್‌ಮೆಂಟ್‌ನ್ನು ರಾಷ್ಟ್ರಾಧ್ಯಕ್ಷರು ಒಪ್ಪಿಕೊಂಡಿದ್ದಾರೆಂದು ಪ್ರಕಟವಾಗಿದೆ. ಈಗ ಉಳಿದಿರುವುದೇನೆಂದರೆ ತಾವು ಆ ಅಮೆಂಡ್‌ಮೆಂಟ್‌ಗೆ ರೂಲ್ಸ್ ಮಾಡಬೇಕು ಅಥವಾ ಸದನದ ಮುಂದೆ ಮತ್ತೆ ತಂದು ಕಳೆದ ಸರ್ಕಾರ ತಂದಿರುವುದು ಪೊಲಿಟಿಕಲ್ ಅಮೆಂಡ್‌ಮೆಂಟ್ ಆಗಿದೆಯಾದ್ದರಿಂದ ನಾವುಗಳು ಅದನ್ನು ಬದಲಾವಣೆ ಮಾಡುತ್ತೇವೆ ಮತ್ತು ಹಿಂದಿನದನ್ನು ಒಡೆದುಹಾಕುತ್ತೇವೆ ಎಂದಾದರೂ ಹೇಳಿ ಅದನ್ನು ಸದನದ ಮುಂದೆ ತರುವ ಬಗ್ಗೆ ಹೇಳಬೇಕು. ಆದರೆ ಅದನ್ನು ಮಾಡಲಿಲ್ಲ. ನಾನು ಇಂದು ಮುಖ್ಯಮಂತ್ರಿಗಳಿಗೆ ಕೇಳಬಯಸುವುದೇನೆಂದರೆ the architect of that amendment was Sri.V.Somanna now he is in your party. ಒಂದುವಾರದ ಹಿಂದೆ ಅಥವಾ ಹದಿನೈದು ದಿವಸಗಳ ಮುಂದೆ ತಾವೇ ಸೋಮಣ್ಣನವರನ್ನು ಕುರಿತು "He is my adviser" ಎಂದು ಹೇಳಿರಿ Now it is time to seek his advice ; his guidance. ಮಧ್ಯಮ ಹಾಗೂ ಬಡ ವರ್ಗದ ಜನಗಳ ಬಗ್ಗೆ ಕರುಣೆ ಇಟ್ಟು ಕಳಕಳಿಯನ್ನು ಇಟ್ಟುಕೊಂಡು 38 ಸಿ ಕಾಯಿದೆಗೆ ಅಮೆಂಡ್‌ಮೆಂಟ್ ಏಕೆ ತಂದರು ಎಂಬುದಕ್ಕೆ it is the right time to seek his advice. ನೀವು ಮೈಸೂರು ಬಗ್ಗೆ ಕಳಕಳಿಯನ್ನು ಇಟ್ಟು ಅವರ ಅಡ್ವೈಸ್‌ನ್ನು ತೆಗೆದುಕೊಂಡಿದ್ದೀರಿ. ಅದೇ ರೀತಿಯಲ್ಲಿ ಬೆಂಗಳೂರಿನ ಬಗ್ಗೆಯೂ ಕೂಡ ಕಳಕಳಿಯನ್ನು ತೋರಿಸುವುದಕ್ಕೋಸ್ಕರ ನೀವು ಸೋಮಣ್ಣನವರ

ಅಡ್ವೈಸ್‌ನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಒಂದು ಉದಾಹರಣೆಯನ್ನು ಕೊಟ್ಟು ಹೇಳುವುದೇನೆಂದರೆ ನನ್ನ ಕ್ಷೇತ್ರದಲ್ಲಿ ಅಗ್ರಹಾರ ದಾಸರಹಳ್ಳಿ ಎಂಬಲ್ಲಿ ಸರ್ವೆ ನಂಬರ್ 39ರ ವಿಚಾರದ ಬಗ್ಗೆ ಹೇಳುತ್ತೇನೆ. ಬಿ.ಡಿ.ಎ. ಟಾಸ್ಕ್‌ಫೋರ್ಸ್‌ನ ಅವರ ಕೃಪೆಗೆ ಒಳಗಾದ ಪ್ರದೇಶ ಈ ಸರ್ವೆ ನಂಬರ್ 39 ಆಗಿದೆ. ಇಲ್ಲಿ ಸುಮಾರು 50 ಮನೆಗಳಿವೆ. ಇಲ್ಲಿರುವ ಜನರು ಕಳೆದ ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದದಾರೆ. ನನಗೆ ತಿಳಿದಿರುವ ಹಾಗೆ ಅಲ್ಲಿರುವವರೆಲ್ಲರೂ ಮಧ್ಯಮ ವರ್ಗಕ್ಕೆ ಸೇರಿದ ಜನಗಳೇ ಆಗಿದ್ದಾರೆ. ಇವರು 1962 ರಿಂದಲೇ ನಿವೇಶನಗಳನ್ನು ಮಾಡಿಕೊಂಡು ಮನೆ ಕಟ್ಟಿಕೋಂಡು ವಾಸ ಮಾಡುತ್ತಿದ್ದಾರೆ. ಆದರೆ ಇಂದು ಆ ಸರ್ವೆ ನಂಬರ್ 39ರ ಬಗ್ಗೆ, ಬಿ.ಡಿ.ಎ. ವರ್ತನೆ ಬಗ್ಗೆ ನಾನು ಹೇಳುತ್ತೇನೆ. ಬಿ.ಡಿ.ಎ., ಸಿ.ಐ.ಟಿ.ಬಿ., ಈ ರೀತಿಯಲ್ಲಿ ಕಂಟಿನ್ಯೂಯಸ್ ಪ್ರೋಸಸ್ ಇದೆ. 1976ರಲ್ಲಿ nomenclature change ಆಯಿತೆ ಹೊರತು ಅವರ ವರ್ತನೆ ಏನೂ ಬದಲಾವಣೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈಗ ವಿಶೇಷವಾಗಿ ಗಮನ ಕೊಡಬೇಕು. ಪ್ರಿಲಿಮನರಿ ನೋಟಿಫಿಕೇಶನ್ 1964ರಲ್ಲಿ ಆಗಿದ್ದರೆ ಫೈನಲ್ ನೋಟಿಫಿಕೇಶನ್ 1971ರಲ್ಲಿ ಆಗಿದೆ, ಅವಾರ್ಡ್ ಪಾಸ್ ಆಗಿರುವುದು 1985ನೇ ಸಾಲಿನಲ್ಲಿ. ಅಂದರೆ 21 ವರ್ಷಗಳ ಸರ್ವೆ ನಂಬರ್ 39ರ ಬಗ್ಗೆ ಬಿ.ಡಿ.ಎ.ನವರಿಗೆ ಗಮನ ಕೊಡುವುದಕ್ಕೆ ಆಗಲಿಲ್ಲವೆಂದರೆ ಅಲ್ಲಿ ನಿವೇಶನ ಪಡೆದಿರುವ ಜನಗಳದ್ದು ತಪ್ಪೋ ಅಥವಾ ಬಿ.ಡಿ.ಎ. ನವರದ್ದು ತಪ್ಪೋ ಎಂಬ ಬಗ್ಗೆ ಈ ಸದನ ಇಂದು ನಿಶ್ಚಯಿಸಬೇಕು. ಬಿ.ಡಿ.ಎ.ದಲ್ಲಿರುವ ಸ್ಪೆಷಲ್ ಲ್ಯಾಂಡ್ ಅಕ್ವಿಸಿಶನ್ ಆಫೀಸರ್‌ರವರು ಕೊಟ್ಟಿರುವ ದಾಖಲೆಯ ಪ್ರಕಾರವೇ ಹೇಳುವುದಾದರೆ "Award mentioned in the RTC against the years 1971-1972 and 1973-1973 is, there are sites and houses." This is as early as in 1971-72. ಬಿ.ಡಿ.ಎ.ದವರೇ ಒಪ್ಪಿಕೊಂಡುಬಿಟ್ಟಿದ್ದಾರೆ. 1976 ಕ್ಕೂ ಮುಂದೆ ಸಿ.ಐ.ಟಿ.ಬಿ. ಆ್ಯಕ್ಟ್ ಇತ್ತು. ಇದು ತಮಗೂ ತಿಳಿದೇ ಇದೆ. ಈ ಆ್ಯಕ್ಟ್‌ನಲ್ಲಿ ಲ್ಯಾಂಡ್ ಅಕ್ವಿಸಿಶನ್‌ಗೆ ಯಾವುದೇ ರೀತಿಯ ಪ್ರೊಸೀಜರ್ ಇರಲಿಲ್ಲ. 1894 ರ ಲ್ಯಾಂಡ್ ಅಕ್ವಿಸಿಶನ್ ಆ್ಯಕ್ಟ್ ಪ್ರಕಾರ ಅಕ್ವೈರ್ ಮಾಡಿಕೊಂಡ ಲ್ಯಾಂಡ್ ಬಗ್ಗೆ ಎರಡು ವರ್ಷಗಳಲ್ಲಿ ಕಾರ್ಯಾಚರಣೆ ಮುಗಿಯಬೇಕಾಗಿತ್ತು. ತದನಂತರ ಅದರ ಬಗ್ಗೆ ಅವಾರ್ಡ್‌ನ್ನು ಪಾಸ್ ಮಾಡಬೇಕಾಗಿತ್ತು. ಆದರೆ 1976ರಲ್ಲಿ ಬಿ.ಡಿ.ಎ. ಆ್ಯಕ್ಟ್ ತಂದಮೇಲೆ ಸೆಕ್ಷನ್ 17, ಸೆಕ್ಷನ್ 18 ಹಾಗೂ ಸೆಕ್ಷನ್ 19 ರಲ್ಲಿ ಲ್ಯಾಂಡ್ ಅಕ್ವಿಸಿಶನ್‌ಗೆ ಯಾವ ರೀತಿಯ ಸಮಯವನ್ನು ನಿಗಧಿ ಮಾಡಿಲ್ಲ. ನೀವೇನಾದರೂ ಅಮೆಂಡ್‌ಮೆಂಟ್ ತಂದರೆ ಮೊದಲು ಈ ಸೆಕ್ಷನ್‌ಗಳಿಗೆ ತರಬೇಕು. ಇದರ ಪ್ರಕಾರ ಯಾವಾಗಲಾದರೂ ಪ್ರಿಲಿಮನರಿ ನೋಟಿಫಿಕೇಷನ್ ಹೊರಡಿಸಬಹುದು, ಯಾವಾಗ ಬೇಕಾದರೂ ಫೈನಲ್ ನೋಟಿಫಿಕೇಸನ್ ಹೊರಡಿಸಬಹುದು ಮತ್ತು ಯಾವಾಗ ಬೇಕಾದರೂ ಆವಾರ್ಡ್ ಪಾಸ್ ಮಾಡಿಕೊಳ್ಳಬಹುದು. ಆ ರೀತಿಯಲ್ಲಿ ಇಷ್ಟಬಂದಹಾಗೆ ಇದೆ. ಈ ರೀತಿಯಲ್ಲಿ ಏನಿದೆಯೋ ಅದಕ್ಕೆ ಮೊದಲು ತಿದ್ದುಪಡಿ ತರಬೇಕಾದ ಅವಶ್ಯಕತೆ ಇದೆ. ಈ ಸದನ ಈ ಕಡೆಗೆ ಮೊದಲು ಗಮನ ಕೊಡಬೇಕು. 1985ರಲ್ಲಿ ಏನು ಅವಾರ್ಡ್ ಪಾಸ್ ಮಾಡಿದ್ದಾರೆ. ಅದು ಲ್ಯಾಂಡ್ ಅಕ್ವಿಸಿಶನ್ ಆ್ಯಕ್ಟ್ ಪ್ರಕಾರ ಯಾವುದೇ ರೀತಿಯಲ್ಲೂ ಊರ್ಜಿತವಾಗುವುದಿಲ್ಲ ಈ ವಿಚಾರವನ್ನು ಅಂದಿನ ಮುಖ್ಯ ಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರ ಗಮನಕ್ಕೆ ತಂದಾಗ ಅವರು ದಿನಾಂಕ 7-10-1997 ರಲಲಿ ಬಿ.ಡಿ.ಎ. ಕಮೀಶನ್‌ರವರಿಗೆ ಏನು ಹೇಳಿದರೆಂದರೆ not to demolish till further enquiry.

ಆ ಫರ್ದರ್ ಎನ್‌ಕ್ವೈರಿ ಆಯಿತೋ ಅಥವಾ ಇಲ್ಲವೋ ನನಗಂತೂ ಗೊತ್ತಿಲ್ಲ. ನಾನು ಸಂಬಂಧಪಟ್ಟ ಕ್ಷೇತ್ರದ ಶಾಸಕನಾಗಿದ್ದೇನೆ. ಇದು ಆದ ಮೇಲೆ 6-1-2000ದಂದು ನಮ್ಮ ಈಗಿನ ಮುಖ್ಯಮಂತ್ರಿಯವರು ಬಿ.ಡಿ.ಎ. ಕಮೀಷನ್‌ರವರಿಗೆ, Some of these areas may have to ge regularised; please discuss. That was on 6-1-2000ಎಂದು ಒಂದು ಷರಾ ಬರೆದರು. ಇದು ಆದಮೇಲೆ ಏಪ್ರಿಲ್ 1ರಂದು I think the B.D.A. wanted to commemorate All Fools Day. ಬಿ.ಡಿ.ಎ.ನವರು ಬುಲ್‌ಡೋಜರ್. ಜೆ.ಸಿ.ಬಿ. ಮುಂತಾದವನ್ನು ತೆಗೆದುಕೊಂಡು ಬಂದುಬಿಟ್ಟರು. ಅದಕ್ಕಿಂತ ಮುಂದೆ ಒಂದಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1987ನೇ ಇಸವಿಯಲ್ಲಿ ಅಲ್ಲಿಯ ನಾಗರೀಕರು Application for regularisation of unauthorised construction ಎಂದು ಕೊಟ್ಟರು. ಸರ್ಕಾರವೇ ಪ್ರಿಂಟ್ ಮಾಡಿರುವಂಥ ಒಂದು ಅಪ್ಲಿಕೇಷನ್ ಫಾರಂ ಆಗಿದ್ದು ಅದರಲ್ಲಿ Are Civic amenties provided? Yes; Road formed? yes; waterline Provided? Yes; Drainage...? Yes; Street light..? Yes; Sewage..? yes. ಈ ರೀತಿ ಎಲ್ಲಾ ಅಮಿನಿಟೀಸ್ ಆ ಜನಕ್ಕೆ ಬಂದಿದೆ. ರಸ್ತೆ, ಲೈಟ್, ಒಳಚರಂಡಿ ಮುಂತಾದ ಎಲ್ಲಾ ವ್ಯವಸ್ಥೆ ಇದೆ. ಬಿ.ಡಿ.ಎ. ಯಿಂದ ಎರಡು ಸಾವಿರ ಸೈಟುಗಳನ್ನು ಬಡ ಜನರಿಗೆ, ಪರಿಶಿಷ್ಟ ಜಾತಿಯವರಿಗೆ ಕೊಟ್ಟಾಗ 'ನೀವು' ಏನು ಬೇಕಾದರೂ ಮಾಡಿ I will not intervene ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಬಿ.ಡಿ.ಎ.ಯರವರಿಗೆ ಆಶ್ವಾಸನೆ ಕೊಟ್ಟಿದ್ದರು ಎಂದು ಪೇಪರ್‌ನಲ್ಲಿ ಬಂತು. ಪ್ರಾಯಶಃ That has given them more strength; that has acted as a tonic. so, we can't do anything. ಎಂದು ಬಿ.ಡಿ.ಎ.ಯವರಿಗೆ ಅನಿಸಿತು. ಬಹುಶಃ ಆ ಕಾರಣದಿಂದ ಇಷ್ಟೆಲ್ಲಾ ಸಿವಿಕ್ ಅಮಿನಿಟೀಸ್ ಇದ್ದರೂ ಕೂಡ 1.4.2000ದಂದು ಪೋಲೀಸ್‌ರವರನ್ನು ಕರೆಸಿ, ಜೆ.ಸಿ.ಬಿ. ಯಂತ್ರ ತಂದು ಮನೆಗಳನ್ನು ಒಡೆಯುವುದಕ್ಕೆ ಪ್ರಾರಂಭಿಸಿದರು. ಸನ್ಮಾನ್ಯ ಮುಖ್ಯಮಂತ್ರಿಯವರೆ, ಸಾಮಾನ್ಯವಾಗಿ ನಾನು ಈ ತರಹದ ಪ್ರತಿಭಟನೆಗೆ ಹೋಗುವವನಲ್ಲ. ಆದರೆ ಅವತ್ತು ಅಲ್ಲಿ ಬಿ.ಡಿ.ಎ.ಯ ಟಾಸ್ಕ್‌ಫೋರ್ಸ್‌ನ ಸೂಪರಿಂಟೆಂಡೆಂಟ್ ಕೂಡ ಇದ್ದು ಒಬ್ಬ 70 ವರ್ಷದ ವೃದ್ದೇ ಸೂಪರಿಂಟೆಂಡೆಂಟ್‌ನ ಕಾಲನ್ನು ಹಿಡಿದುಕೊಂಡು ಬಿದ್ದು ಒದ್ದಾಡಿದ್ದು that moved me ಅವರ ಪಕ್ಕದಲ್ಲಿ ಎಳೆಯ ಮಕ್ಕಳು ಇದ್ದರು, ಅವರದು ಏನೂ ತಪ್ಪು ಅಲ್ಲ, ಜೆ.ಸಿ.ಬಿ. ಬಂದು ಮನೆಗಳನ್ನು ಒಡೆದುಹಾಕುತ್ತಿರುವುದು, ಪೊಲೀಸರು ಹೊಡೆಯುತ್ತಿದ್ದುದನ್ನು ನೋಡಿ ಗಾಬರಿಯಾಗಿ ಒದ್ದಾಡುತ್ತಿದ್ದುದು that moved me. ನಾನು ಅಲ್ಲಿಗೆ ಹೋಗಿ ಪ್ರತಿಭಟನೆ ಮಾಡಿ ನಿಲ್ಲಿಸಿದೆ. ಅಕಸ್ಮಾತ್ ನಾನು ಅಲ್ಲಿ ಇಲ್ಲದಿದ್ದರೆ ಎಷ್ಟು ಮನೆಗಳು ಉರುಳುತ್ತಿದ್ದವೋ ನನಗೆ ಗೊತ್ತಿಲ್ಲ. ಅಲ್ಲಿ ಎಷ್ಟು ರಕ್ತ ಹರಿಯುತ್ತಿತ್ತೋ ಹೇಳುವುದಕದಕ್ಕಾಗುವುದಿಲ್ಲ. ನಾನೇನೋ ಉದ್ವೇಗ ಮಾಡುವುದಕ್ಕೋಸ್ಕರ ಇದನ್ನು ಹೇಳುತ್ತಿಲ್ಲ. ನಾನು ಅಲ್ಲಿ ನೋಡಿದ ಸಂಗತಿಯನ್ನು ಇವತ್ತು ಇಲ್ಲಿ ಹೇಳುತ್ತಿದ್ದೇನೆ. ಅಲ್ಲಿ ಬುಲ್‌ಡೋಜರ, ಜೆ.ಸಿ.ಬಿ. ಯಂತ್ರಗಳನ್ನು ತೆಗೆದುಕೊಂಡು ಹೋಗಿ ಮನೆಗಳನ್ನು ಒಡೆದುಹಾಕಿ ಆ ಅಮಾಯಕ ಜನರನ್ನು ಹಾಳು ಮಾಡುವುದು ಏಕೆ? ಸಿವಿಕ್ ಅಮಿನಿಟೀಸ್ ಇಲ್ಲ ಸೈಟುಗಳು, ಪಾರ್ಕುಗಳಲ್ಲಿ ಮನೆಗಳು ಇದ್ದರೆ ನಿಮ್ಮ ಗ್ಯಾಂಗನ್ನು ನಮಗೆ ಕೊಟ್ಟರೆ ನಾವೇ ಒಡೆದು ಹಾಕುತ್ತೇವೆಂದು ಅಲ್ಲಿಯ ನಾಗರಿಕರೇ ಹೇಳಿದರು. ಆದರೆ ಬಿ.ಡಿ.ಎ. ಯವರು

ತಮ್ಮ ಪೌರುಷ, ಪವರನ್ನು ತೋರಿಸಬೇಕೆಂದು ಜೆ.ಸಿ.ಬಿ. ಯನ್ನು ತಂದು ಮನೆಗಳನ್ನು ಒಡೆದುಹಾಕಿದರು. ಏಕೆ ಹೀಗೆ ಆಗುತ್ತಿದೆ? ಏಕೆ ಈ ಪರಿಸ್ಥಿತಿ ಬರುತ್ತಿದೆ? ಏಕೆ ಜನ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ? ಏಕೆ ಮನೆಗಳನ್ನು ಒಡೆಯುವುದಕ್ಕೆ ಸಂಬಂಧಪಟ್ಟವರು ಬರುತ್ತಿದ್ದಾರೆ?..because of the B.D.A. working! ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ- ಬಿ.ಡಿ.ಎ. ನವರು 1987ರಿಂದ 1994ವರೆಗೆ 465 ಎಕರೆ ಜಾಗವನ್ನು ಬೇರೆ ಬೇರೆ ಜಾಗಗಳಲ್ಲಿ ಅಕ್ವೈರ್ ಮಾಡಿಕೊಂಡರು ಇವತ್ತು ಏನಾಗಿದೆ ಎಂದರೆ ಉದಾಹರಣೆಗೆ ಹೇಳುವುದಾದರೆ ಲಗ್ಗೆರೆಯಲ್ಲಿ Preliminary Notification in 1988, Final Notification till date not issued. Of course the sacheme is withdrawn in November.1999 at the Authority's meeting. Further expansion of H.S.R.1987- Prelimihary Notification . Final Notification till date not issued. B.T.M. V-stage. Final Notification till date not issued. ಹೀಗೆ ನಾನು ಹಲವು ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. 465 ಎಕರೆ ಜಾಗದ ಹಣೆಬರಹ ಇದೇ ಆಗಿದೆ. ಇನ್ನು ಬಿ.ಡಿ.ಎ. ಯಲ್ಲಿರುವ ಬಹಳ ಸ್ವಾರಸ್ಯಕರವಾದ ಅಂಶ ಏನೆಂದರೆ Name of the Scheme: J.P. Nagar VII Phase. Total area 884 Acres 26 quntas . Present position: Most of the lands are built up and the scheme is quashed by the High Court on account of defect of scheme formed by B.D.A. what I want to know is the stand of the Government. ನಾನು ಸಾಕಷ್ಟು ತಯಾರಿ ಮಾಡಿಕೊಂಡು ಬಂದಿರುವುದರಿಂದ ಹೀಗೆ ಉದ್ದಕ್ಕೂ ಹೇಳುತ್ತಾ ಹೋಗಬಹುದು. ಆದರೆ ಸಮಯದ ಅಭಾವ ಇರುವುದರಿಂದ ಇದನ್ನು ಇಲ್ಲಿಗೆ ನಿಲ್ಲಿಸಿ ರೆವಿನ್ಯೂ ನಿವೇಶನ ಎಂದರೆ ಏನು? ಈ ರೆವಿನ್ಯೂ ನಿವೇಶನಕ್ಕೆ ಯಾರು ಕಾರಣಕರ್ತರು? ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ನಿಲುವು ಏನು ಎನ್ನುವುದನ್ನು ನಾನು ತಿಳಿಯಬಯಸುತ್ತೇನೆ. ನಾವು ಆವಾಗಲೇ ಹೇಳಿದ ಹಾಗೆ We love this city. We don't have lust for this city unlike others. ಖಂಡಿತ ಇಲ್ಲ. ಈ ಬೆಂಗಳೂರು ನಗರ ಸುಂದರವಾಗಿ ಚೆನ್ನಾಗಿ ಆಗಬೇಕೆಂದು ನಾವು ಅಪೇಕ್ಷೆ ಪಡುತ್ತೇವೆ. ಈ ರೆವಿನ್ಯೂ ಸೈಟ್ ಎಂದರೆ ಏನು ಎನ್ನುವುದರ ಬಗ್ಗೆ ಎಲ್ಲಿಯಾದರೂ ಡೆಫಿನೇಷನ್ ಇದೆಯೇ ಎಂದು ಹುಡುಕಿದೆ. ಆದರೆ ಎಲ್ಲೂ ಸಿಗಲಿಲ್ಲ. But it is commonly used ನನ್ನ ಪ್ರಕಾರ ಈ ಸೈಟುಗಳನ್ನೆಲ್ಲ ಸಬ್ ರಿಜಿಸ್ಟ್ರಾರ್ ರವರ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಮಾಡಲಾಗಿದೆ. ಇದರಿಂದ ಸರ್ಕಾರಕ್ಕೆ ಕೂಡ ರೆವಿನ್ಯೂ ಬಂದಿದೆ. ಮಾನ್ಯ ಸಿಂಧ್ಯಾ ರವರು ಹೇಳಿದ ಹಾಗೆ ಈ ರೆವಿನ್ಯೂ ಸೈಟ್‌ನಲ್ಲಿ ಮನೆಕಟ್ಟಿಸಬೇಕಾದರೆ ಅದಕ್ಕೆ ಪ್ಲಾನ್ ಕೊಡುತ್ತಾರೆ. ವಾಟರ್ ಕನೆಕ್ಷನ್, ಎಲೆಕ್ಟ್ರಿಸಿಟಿ ಕನೆಕ್ಷನ್ ಹೀಗೆ ಎಲ್ಲವನ್ನೂ ಕೊಡುತ್ತಾರೆ ಮತ್ತು ಇದರಿಂದ ಸರ್ಕಾರಕ್ಕೆ ಸಾಕಷ್ಟು ಆದಾಯ ಕೂಡ ಬಂದಿದೆ.' ಕೊಟ್ಟವನು ಕೋಡಂಗಿ ಇಸುಕೊಂಡವನು ವೀರಭದ್ರ' ಎನ್ನುವ ಗಾದೆಯಂತೆ ಬಿ.ಡಿ.ಎ. ನವರೇ ಅಥವಾ ಸರ್ಕಾರಿ ಅಧಿಕಾರಿಗಳು ಅನೇಕರು ಬಂದು- ಮನೆ ಕಟ್ಟಿರಿ ನಾವು ಇದ್ದೀವಿ ಎಂದು ಆ ಜನಗಳಿಗೆ ಧೈರ್ಯ ತುಂಬಿ ತಮ್ಮ ಜೇಬನ್ನು ತುಂಬಿಸಿಕೊಂಡು ಹೋದರು. ಇವತ್ತು ಅದೇ ಅಧಿಕಾರಿಗಳು ಮುಂದೆ ಬಂದು ಈ ಮನೆ, ಆ ಮನೆ ಒಡೆಯಿರಿ ಎಂದು ಹೇಳುವುದು ಇದು ಯಾವ

ನ್ಯಾಯ? ಆದ್ದರಿಂದ ರೆವಿನ್ಯೂ ಸೈಟಿನ ಬಗ್ಗೆ ಸರ್ಕಾರ ತನ್ನ ನಿಲುವನ್ನು ತಿಳಿಸಬೇಕು. ಇನ್ನು ಮುಂದಿನ ಪ್ರಶ್ನೆ ಏನೆಂದರೆ 10 ಸಾವಿರ ಜನಕ್ಕೆ ಬಿ.ಡಿ.ಎ. ಸೈಟುಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ಈಗ ರೆವಿನ್ಯೂ ಸೈಟುಗಳಲ್ಲಿ ಕಟ್ಟಿರುವ ಮನೆಗಳನ್ನು ಒಡೆದು ಹಾಕುತ್ತಿದ್ದೀರಿ. ಆ ಹತ್ತು ಸಾವಿರ ಜನರು ಈಗಾಗಲೇ ಸದರಿ ಸ್ಥಳಗಳಲ್ಲಿಯೇ ಇದ್ದಾರಲ್ಲವೇ? ಅಲ್ಲಿಯೇ ರಸ್ತೆ, ಒಳಚರಂಡಿ ವ್ಯವಸ್ಥೆ ವಿದ್ಯುತ್ ವ್ಯವಸ್ಥೆ ಇರುವುದರಿಂದ ಅವರಿಗೇ ಏಕೆ ಬಿ.ಡಿ.ಎ. ರೇಟ್‌ನಲ್ಲಿ ಆ ಜಾಗವನ್ನು ಕೊಡಬಾರದು? ಅಲ್ಲಿಯ ಜನರು ಯಾರೋ ಹತ್ತಿರದಿಂದ ಸೈಟ್ ತೆಗೆದುಕೊಂಡು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವರೆಲ್ಲ ಅಮಾಯಕರು. ಅವರಿಗೆ ಬಿ.ಡಿ.ಎ. ಸೈಟಿನ ರೇಟನ್ನು ಫಿಕ್ಸ್ ಮಾಡಿದರೆ ಅವರು ಕೊಡುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ದಯಮಾಡಿ ಅವರ ನೆಮ್ಮದಿಯ ಬಾಳ್ವೆಗೆ ಬೆಂಕಿ ಇಡುವುದು ಬೇಡ. ಜೆ.ಸಿ.ಬಿ. ತೆಗೆದುಕೊಂಡು ಒಡೆಯುವುದು ಬೇಡ, ಅವರ ನೆಮ್ಮದಿಯ ಬಾಳಿಗೆ ಬುಲ್‌ಡೋಜರ್ ತೆಗೆದುಕೊಂಡು ಹೋಗಿ ಒಡೆದುಹಾಕುವುದು ಬೇಡ ಈ ದೃಷ್ಟಿಯಿಂದ ಸರ್ಕಾರ ತನ್ನ ಖಚಿತವಾದ ನಿಲುವನ್ನು Administration with a human touch ಎಂದು ಏನು ಹೇಳುತ್ತಾರೆ That shall be administration with human touch ದಯವಿಟ್ಟು ಇದರ ಕಡೆಗೆ ಗಮನಕೊಟ್ಟು, ಇವತ್ತು ಸರ್ಕಾರ ತನ್ನ ನಿಲುವನ್ನು ಪ್ರಕಟಿಸಿ ಎಲ್ಲೆಲ್ಲಿ ಪಾರ್ಕು, ಎಲ್ಲೆಲ್ಲಿ ಸಿ.ಎ. ಸೈಟುಗಳು ಅಥವಾ ಎಲ್ಲೆಲ್ಲಿ ರಸ್ತೆಗೆ ಜಾಗ ಬೇಕು ಅಲ್ಲಿ ಕಟ್ಟಡಗಳು ಇದ್ದರೆ ಅದನ್ನು ಹೊಡೆಯಲಿ, ಮತ್ತು ಅದಕ್ಕೆ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡಲಿ. ಆದರೆ ಈಗಾಗಲೇ ಯಾರ್‍ಯಾರು ಮನೆಗಳನ್ನು ಕಟ್ಟಿದ್ದಾರೆ. 1965ನೇ ಇಸವಿ ಅಥವಾ 70ನೇ ಇಸವಿಯಿಂದ ಹೀಗೆ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವುದಕ್ಕೆ ದಾಖಲೆ ಏನು ಇದೆ, ಅವರಿಗೂ ಕೂಡ ಬೆಂಗಳೂರಿನಲ್ಲಿ ಸದಾಶಿವನಗರ ಅಥವಾ ಕೋರಮಂಗಲದಲ್ಲಿ ವಾಸಿಸುವ ಶ್ರೀಮಂತರ ತರಹ ಇವರಿಗೂ ಕೂಡ ಬದುಕುವುದಕ್ಕೆ ಅವಕಾಶ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಹೆಚ್ಚಿನ ವಿಷಯಗಳನ್ನು ಶ್ರೀಮಾನ್ ಸಿಂಧ್ಯಾರವರು ಮತ್ತು ಶ್ರೀ ಸುರೇಶ್ ಕುಮಾರ್ ಅವರು ಹೇಳಿದ್ದಾರೆ. ಮುಖ್ಯವಾಗಿ ಅನೇಕ ಬಡಾವಣೆಗಳಲ್ಲಿ ಅದರಲ್ಲೂ ಕೆಂಗೇರಿ ಮತ್ತು ಶ್ರೀ ಅಶೋಕ ಅವರ ಕ್ಷೇತ್ರದಲ್ಲಿ ಕೂಡ ಹೆಚ್ಚಿನ ರೀತಿಯಲ್ಲಿ ಮನೆಗಳ ಡೆಮಾಲಿಶ್ ನಡೆಯಿತು. ಬೆಂಗಳೂರನ್ನು ಬಹಳ ಸುಂದರವಾಗಿ ಮಾಡಬೇಕು ಎನ್ನುವ ವಿಚಾರ ಮಾನ್ಯ ಮುಖ್ಯಮಂತ್ರಿಗಳ ಇಚ್ಛೆಯಾಗಿರುವುದು ಇದು ನಿಜವಾಗಿಯೂ ಶ್ಲಾಘನೀಯವಾದ ವಿಚಾರವಾಗಿದೆ. ಒಂದು ದಿವಸ ಸುಮಾರು 11-30ಗಂಟೆಗೆ ನಮ್ಮ ಕ್ಷೇತ್ರದವರು ಫೋನ್ ಮಾಡಿ ನಗರಪಾಲಿಕೆಯ ಕಮೀಷನರ್ ಆದ ಶ್ರೀ ಜೈರಾಜ್ ಅವರು ನಮ್ಮ ಅಂಗಡಿಯನ್ನೆಲ್ಲ ಒಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ. ಇದು ರಾತ್ರಿ 11-30 ಗಂಟೆ ಆಗಿದ್ದರಿಂದ ಬಹುಶಃ ಹಗಲು ಹೊತ್ತು ಡೆಮಾಲಿಶ್ ಮಾಡಿದರೆ ಜನರೆಲ್ಲ ಬಂದು ಗಲಾಟೆ ಮಾಡುತ್ತಾರೆ ಎಂದು ಹಾಗೆ ಮಾಡುತ್ತಾರೆ. ಗಾಂಧೀ ಬಜಾರ್‌ನಲ್ಲಿ ಅಂಗಡಿಗಳನ್ನು ಒಡೆಯುತ್ತಿದ್ದಾರೆ ಎಂದು ಹೇಳಿದಾಗ ನಾನು ಅಲ್ಲಿಗೆ ಹೋಗಿ ನೋಡಿದ ಸಂದರ್ಭದಲ್ಲಿ ಅಲ್ಲಿ ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೋ ಅದನ್ನು ಮಾತ್ರ ಒಡೆಯುತ್ತಿದ್ದಾರೆ ಎಲ್ಲವನ್ನೂ ಒಡೆಯುತ್ತಿಲ್ಲ ಎಂದು ಗೊತ್ತಾಯಿತು. ಒತ್ತುವರಿ ಎಂದರೆ ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡರೆ ಅದು ತಪ್ಪು. ಅದು ಯಾರೇ ಆಗಲಿ ಮಾಡಿರಬಾರದು.

ಒತ್ತುವರಿ ಆಗಿರುವುದನ್ನು ಅಲ್ಲಿಯ ಕಟ್ಟಡಗಳನ್ನು ಬೇಕಾದರೆ ಒಡೆಯಲಿ, ನಿಮ್ಮ ಅಂಗಡಿಗಳನ್ನು ಭದ್ರವಾಗಿ ನೋಡಿಕೊಳ್ಳಿ ಎಂದು ಹೇಳಿದೆವು. ಶ್ರೀ ಜೈರಾಜ್, ಕಮೀಷನರ್ ಅವರು ಕೂಡ ಬೆಂಗಳೂರನ್ನು ಸುಂದರ, ಸ್ವಚ್ಛ ನಗರವನ್ನಾಗಿ ಮಾಡಬೇಕು. ಎನ್ನುವ ಒಳ್ಳೆಯ ಉದ್ದೇಶದಿಂದ ಬಹಳ ಆಸಕ್ತಿಯಿಂದ ಕೆಲವು ಕೆಲಸವನ್ನು ಮಾಡಿದರು. ಆದರೆ ಕೆಲವೊಂದು ಘಟನೆಗಳನ್ನು ನೋಡಿ ಏಕೋ ಅವರು ಹಿಂದೆ ಹಿಂದೆ ಹೋಗುತ್ತಿದ್ದಾರೆ. ಈಗ ಬಿ. ಡಿ. ಎ. ಚೇರ್‌ಮೆನ್ ಜಯಕರ್ ಅವರ ಮೇಲೆ ಕೆಲವು ದೂರುಗಳು ಬರುತ್ತಿವೆ. ಮನೆಗಳನ್ನು ಒಡೆದಿರುವ ಬಗ್ಗೆ ಶ್ರೀ ಸುರೇಶ್‌ಕುಮಾರ್ ಮತ್ತು ಶ್ರೀ ಸಿಂಧ್ಯಾರವರು ಬಹಳಷ್ಟು ಹೇಳಿದ್ದಾರೆ. What happened was, Section 33-C was amended. Why rules were not framed? ಈ ವಿಷಯ ಹೈಕೋರ್ಟ್‌ನಲ್ಲಿ ಬಂತು. ಏಕೆಂದರೆ ಸುಮಾರು 50 ಜನರು ತಮ್ಮ ಮನೆಗಳನ್ನು ಒಡೆಯಬಹುದು ಎನ್ನುವ ಭಾವನೆಯಿಂದ ಕೋರ್ಟ್‌ನಲ್ಲಿ ಇದ್ದೆ. ರೆಡ್ಡಿಯವರೆ ಮಾನ್ಯ ಮುಖ್ಯಮಂತ್ರಿಗಳನ್ನು ದಯವಿಟ್ಟು ನೀವು ನೋಡಿ, ಇದನ್ನು ಡೆಮಾಲಿಷ್ ಮಾಡುವುದಕ್ಕೆ ಮುಂಚೆ ಬಂದು ನೋಟೀಸ್ ಇಶ್ಯೂ ಮಾಡುವುದು ಏನಾದರೂ ಹೇಳಿ ಎಂದು ಅಲ್ಲಿ ಹೇಳಿದರು. ಬಹುಶಃ ಇದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಆಗಲಿಲ್ಲ. ಏಕೆಂದರೆ ನಾನು ಅಲ್ಲಿ ಯೂನಿಫಾರಂ ಹಾಕಿರಲಿಲ್ಲ. ಆದ್ದರಿಂದ ಏನೂ ಮಾತನಾಡಲಿಕ್ಕೆ ಆಗಲಿಲ್ಲ. ಸುಮ್ಮನೆ ಕುಳಿತಿದ್ದೆ. ಈಗ ಕೆಂಗೇರಿ ಕಡೆಯಿಂದ ಮನೆಗಳನ್ನು ಒಯುತ್ತಿದ್ದಾರೆಂದು ನೂರಾರು ಜನ ದೂರುಗಳನ್ನು ಹೇಳುತ್ತಿದ್ದಾರೆ. ಶ್ರೀ ಅಶೋಕ್ ಅವರ ಕ್ಷೇತ್ರದಲ್ಲಿ ಸಾವಿರಾರು ಮನೆಗಳನ್ನು ಒಡೆದು ಹಾಕುತ್ತಲೆ ಎಂದು ತಿಳಿದುಬಂದಿದೆ. ಬೆಂಗಳೂರಿನಲ್ಲಿ ರಸ್ತೆಗಳನ್ನು ದೊಡ್ಡದು ಮಾಡಬೇಕು, ಕಟ್ಟಡಗಳನ್ನು ದೊಡ್ಡದಾಗಿ ರಸ್ತೆಬದಿಯಲ್ಲಿ ಕಟ್ಟಿರುವುದರಿಂದ ರಸ್ತೆಗಳನ್ನು ಅಗಲ ಮಾಡುವುದಕ್ಕೆ ಕಷ್ಟವಾಗುತ್ತಿದೆ. ರಿಚ್‌ಮಂಡ್‌ಸರ್ಕಲ್‌ಗಳನಲ್ಲಿ ರಸ್ತೆಯೆ ಇಲ್ಲ. ರಸ್ತೆಗಳನ್ನು ಅಗಲ ಮಾಡಬೆಕು ಇದು ಒಳ್ಳೆಯ ವಿಚಾರ. ಆದರೆ ಮನೆಗಳನ್ನು ಒಡೆದರೆ ಖಂಡಿತಾ ಕಷ್ಟವಾಗುತ್ತದೆ. ಬಡವರು, ತುಂಬಾ ಕಷ್ಟದಲ್ಲಿ ಇರತಕ್ಕಂಥವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ರಸ್ತೆಗೆ ಬೇಕಾದಷ್ಟು ಇನ್ಫ್ಲ್ಯಾಂಡ್ ಇದೆ. ನೆಲಗಳ್ಳರು ಯಾರು ಇದ್ದಾರೆ ಅವರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಬಡವರಿಗೆ ಕೊಡಬಹುದು. ಅದನ್ನು ಬಿಟ್ಟು ಮನೆಗಳನ್ನನು ಕಟ್ಟುವುದಕ್ಕೆ ಬೆಟರ್‌ಮೆಂಟ್ ಚಾರ್ಜ್ ಕೊಟ್ಟಿದ್ದಾರೆ, ಕಾರ್ಪೊರೇಷನ್‌ನಿಂದ ಪ್ಲಾನ್ ತೆಗೆದುಕೊಂಡಿದ್ದಾರೆ, ಖಾತಾ ಮಾಡಿಸಿಕೊಂಡಿದ್ದಾರೆ ಅಪ್ರೂವ್‌ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಇನ್ನು ಡೆಮಾಲಿಶ್ ಕೆಲಸ ನಿಲ್ಲಬೇಕು ಮತ್ತು ಇದರ ಬಗ್ಗೆ ಈಗಾಗಲೇ ಕೋರ್ಟಿನಲ್ಲಿ ಕೇಸ್ ಇದೆ. ಮತ್ತು ಮುಖ್ಯವಾಗಿ ಕೆಂಗೇರಿ, ರಾಜಾಜಿನಗರ, ಶ್ರೀ ಅಶೋಕ್ ಅವರ ಕ್ಷೇತ್ರದಲ್ಲಿ ಡೆಮಾಲಿಶ್ ಮಾಡುವುದನ್ನು ನಿಲ್ಲಿಸಿ, ಬಿ. ಡಿ. ಎ. ಆ್ಯಕ್ಟ್ ನಲ್ಲಿ ಸೆಕ್ಷನ್ 33ಗೆ ಅಮೆಂಡ್‌ಮೆಂಟ್ ರೂಲ್ಸ್ ಮಾಡಿ ಅದು ಎಫೆಕ್ಟೀವ್ ಆಗಿ ಆಗುವಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಅಧ್ಯಕ್ಷರೆ, ದುರಾದೃಷ್ಟ ಏನೆಂದರೆ 100ಕ್ಕೆ 90ರಷ್ಟು ಮನೆಗಳನ್ನು ಏನು ಒಡೆದಿದ್ದಾರೆ ಅದು ನನ್ನ ಕ್ಷೇತ್ರದಲ್ಲಿ ಹೆಚ್ಚಿಗೆ ಆಗಿದೆ. 15 ದಿವಸಗಳಿಂದ ಅಲ್ಲಿಯ ಜನರು ಯಾರೂ ನಿದ್ದೆ ಮಾಡುತ್ತಿಲ್ಲ. ಅವರು ಕೆಲಸಗಳಿಗೆ ಹೋಗುತ್ತಿಲ್ಲ, ತಮ್ಮ ತಮ್ಮ ವ್ಯಾಪಾರಕ್ಕೆ ಹೋಗುತ್ತಿಲ್ಲ, ಅವರಿಗೆ ಪ್ರತೀದಿವಸ ಮನೆಯನ್ನು ಕಾಯುವುದೇ ಆಗಿದೆ. ಮಕ್ಕಳನ್ನು ಕಾಲೇಜಿಗೆ ಕಳುಹಿಸುತ್ತಿಲ್ಲ. ಮಕ್ಕಳು ಕಾಲೇಜಿಗೆ ಹೋದ ಸಮಯದಲ್ಲಿ ಎಲ್ಲಿ ಬಂದು ಒಡೆದು

ಹಾಕುತ್ತಾರೋ ಎನ್ನುವ ಕಾರಣದಿಂದ ಅವರನ್ನು ಕಾಲೇಜಿಗೆ ಕಳುಹಿಸುತ್ತಿಲ್ಲ. ಈಗಾಗಲೇ 60 ಮನೆಗಳನ್ನು ಒಡೆದಿದ್ದಾರೆ. ನನ್ನ ಪ್ರಶ್ನೆ ಏನೆಂದರೆ 60 ಮನೆಗಳನ್ನು ಒಡೆದು ಹಾಕಿರುವುದರಂದ ಅವರು ಇವತ್ತು ಬೀದಿ ಪಾಲಾಗಿದ್ದಾರೆ. ಅಲ್ಪಸಂಖ್ಯಾತರಿಗೆ ನಾವು ಸಾಕಷ್ಟು ಸಹಾಯ, ಅನುಕೂಲ ಮಾಡಿಕೊಡುತ್ತೇವೆ, ಅವರು ನಮಗೆ ಬೆಂಬಲ ಕೊಟ್ಟಿದ್ದಾರೆಂದು ಸರ್ಕಾರವನ್ನು ನಡೆಸುವವರು ಹೇಳುತ್ತಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ನಜೀರ್ ಅಹಮದ್ ಎನ್ನುವ ವ್ಯಕ್ತಿ ಬಿ.ಟಿ.ಎಂ. ಲೇಔಟ್ 12 ಲಕ್ಷದ ಮನೆಯನ್ನು ಕಟ್ಟಿಸಿದ್ದಾರೆ. ಅವರು ಸಿಟಿ ಕಾರ್ಪೊರೇಷನ್‌ಗೆ 40,250 ರೂಪಾಯಿಗಳ ಬೆಟರ್‌ಮೆಂಟ್ ಚಾರ್ಜ್ ಕಟ್ಟಿದ್ದಾರೆ. 5 ವರ್ಷದ ತೆರಿಗೆ ರೂಪದಲ್ಲಿ 6, 485 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇರೀತಿ ಆ ಜಾಗದ ರಿಜಿಸ್ಟ್ರೇಷನ್ ಮಾಡುವುದಕ್ಕೆ ಸ್ಟ್ಯಾಂಪ್ ಡ್ಯೂಟಿ ರೂಪದಲ್ಲಿ 82,000 ರೂಪಾಯಿಗಳನ್ನು ಕಟ್ಟಿದ್ದಾರೆ. ಅಂದರೆ ಸುಮಾರು ಒಟ್ಟು 2 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದು ಸರ್ಕಾರದ ಆಡಳಿತಕ್ಕೆ ಒಳಪಡುವಂಥ ನಗರಪಾಲಿಕೆಯವರು ಕೊಟ್ಟಿರುವಂಥ ಪ್ಲಾನ್ ಅಪ್ರೂವಲ್ ಪತ್ರ. ಇದಕ್ಕೆ ಆಯುಕ್ತರು ಮತ್ತು ಎಕ್ಸಿಕ್ಯೂಟೀವ್ ಇಂಜಿನಿಯರ್ ಸಹಿ ಹಾಕಿ ಕೊಟ್ಟಿದ್ದಾರೆ. ಅಂದರೆ ಮನೆ ಕಟ್ಟಬಹುದು ಎನ್ನುವ ಅಧಿಕಾರ ಪತ್ರವನ್ನು ಕೊಟ್ಟಿದ್ದಾರೆ ಯಾವುದೇ ಪರಭಾರೆ ಪತ್ರದಲ್ಲಿ ಬಿ.ಡಿ.ಎ.ಯವರ ಹೆಸರು ಬಂದಿಲ್ಲ. ನಗರಪಾಲಿಕೆಯವರ ಹೆಸರು ಬಂದಿದೆ. ಖಾತಾ ಕೂಡ ಮಾಡಿಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಇತ್ತೀಚೆಗೆ ಡ್ಯಾಡಿ-ಮಮ್ಮಿ ಎನ್ನುವ ಜಾಹೀರಾತು ಬಂದಿತ್ತು. ಬೇಗ ಬಂದು ತೆಗೆದುಕೊಂಡರೆ 4 ಸಾವಿರ ರೂಪಾಯಿಯ ಸೀರೆಯನ್ನು ಒಂದೇ ಸಾವಿರಕ್ಕೆ ಕೊಡುತ್ತೇವೆ ಎನ್ನುವ ಜಾಹೀರಾತು ಬಂದಿತ್ತು. ಆ ತರಹದಲ್ಲಿ ಮಹಾನಗರ ಪಾಲಿಕೆಯವರು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿದ್ದಾರೆ. 'ಬ್ಯಾಟರಾಯನಪುರ ನಗರಸಭೆ, ದಾಸರಹಳ್ಳಿ ನಗರಸಭೆ, ಬೆಂಗಳೂರು ನಗರಪಾಲಿಕೆ ಇವರು- ಬೇಗ ನೀವು ಚದರಡಿಗೆ 100 ರೂಪಾಯಿಯ ಹಾಗೆ ಕಟ್ಟಿಬಿಟ್ಟರೆ ನಿಮಗೆ ಬೇಗ ಖಾತೆ ಕೊಟ್ಟುಬಿಡುತ್ತೇವೆ, ಈ ಸಮಯ ಬಿಟ್ಟರೆ ಚದರಡಿಗೆ 200 ರೂಪಾಯಿ ಆಗುತ್ತದೆ ಎಂದು ಹೇಳಿ ಜಾಹಿರಾತು ಕೊಟ್ಟಿದ್ದಾರೆ. '' ಬೆಂಗಳೂರು ನಗರದ ಸುತ್ತ ಮುತ್ತ ಹೊಸದಾಗಿ ನಿರ್ಮಾಣವಾಗಿರುವ ದಾಸರಹಳ್ಳಿ, ಪಟ್ಟಣಗೆರೆ, ಬೊಮ್ಮನಹಳ್ಳಿ, ಮಹದೇವಪುರ, ಕೃಷ್ಣರಾಜಪುರ, ಯಲಹಂಕ ಈ ಎಲ್ಲಾ ಗ್ರಾಮಗಳಲ್ಲಿರುವ ರೆವಿನ್ಯೂ ಕಟ್ಟಡಗಳನ್ನು ಹಾಗೂ ನಿವೇಶನಗಳಿಗೆ ಸರ್ಕಾರದ ಆದೇಶ ಸಂಖ್ಯೆ: 30 ಟಿಡಿಪಿ 97 ದಿನಾಂಕ 30-6-1997ರಂತೆ ಅಭಿವೃದ್ಧಿ ಶುಲ್ಕ ವಿಧಿಸಿ ಖಾತಾ ಮತ್ತು ಹೋಲ್ಡರ್ ಖಾತಾ ಮಾಡುವ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಉಪಯೋಕಿಸಿಕೊಂಡು ತಮ್ಮ ಆಸ್ತಿಗಳಿಗೆ ಅಧಿಕೃತ ದಾಖಲೆಗನ್ನು ಪಡೆಯಲು ಈ ಮೂಲಕ ತಿಳಿಯಪಡಿಸಲಾಗಿದೆ.. ಸರ್ಕಾರದ ಆದೇಶ ನಂಬರ್ 106,..... 10 ರಂತೆ ಖಾತೆಗೆ ಅಭಿವೃದ್ಧಿ ಶುಲ್ಕ ಚದರ ಗಜಕ್ಕೆ 100 ರೂಪಯಿಗಳಂತೆ ತದನಂತರ ಬರುವ ಅರ್ಜಿಗಳನ್ನು ಚದರ ಗಜಕ್ಕೆ 200 ರೂಪಾಯಿಗಳಂತೆ ವಿಧಿಸಲಾಗುವುದು. ದಿನಾಂಕ 30-3-1998ರ ಒಳಗೆ ಖಾತೆ ಮಾಡಿಸಿಕೊಂಡು ಅನುಕೂಲ ಪಡೆದುಕೊಳ್ಳಬೇಕೆಂದು ಈ ಮೂಲಕ ತಿಳಿಸುತ್ತೇನೆ ಎಂದು ಅಸಿಸ್ಟೆಂಟ್ ಕಮೀಷನರ್ ಅವರು ಸಹಿ ಮಾಡಿ ಜಾಹೀರಾತು ಕೊಟ್ಟಿದ್ದಾರೆ. ಇದು ಒಂದೇ ಅಲ್ಲಾ ಬೇರೆ ಬೇರೆ ಸರ್ಕಾರಿ ಸಂಸ್ಥೆಗಳು ಕೂಡ ಬೇಗ ಬೇಗ ಖಾತೆ ಮಾಡಿಸಿಕೊಳ್ಳಿ ಎಂದು ಜಾಹೀರಾತು ಕೊಟ್ಟಿದ್ದಾರೆ. ನನಗೆ ಬಂದ ಮಾಹಿತಿ ಪ್ರಕಾರ ನಗರಪಾಲಿಕೆ, ಸಿ.ಎಂ.ಸಿ. ಪುರಸಭೆಗಳು ಇಲ್ಲಿಗೆ ಸಾರ್ವಜನಿಕರು ಸುಮಾರು

150 ಕೋಟಿ ರೂಪಯಿಗಳನ್ನು ಕಟ್ಟಿದ್ದಾರೆ. ಇವತ್ತು ಇವರ ಗತಿ ಏನು? ಅಕ್ರಮ ಕಟ್ಟಡಗಳನ್ನು ಸಕ್ರಮ ಮಾಡುತ್ತೇವೆ ಎನ್ನುವ ಒಂದು ಹೇಳಿಕೆಯನ್ನು ಸರ್ಕಾರ ಕೊಟ್ಟು ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿತು. ಅರ್ಜಿಗಳನ್ನು ಕಾಲ್‌ಫರ್ ಮಾಡಿ ಅದಕ್ಕೆ ಒಂದು ಖಾತಾ ಮೇಳ ಮಾಡಿದರು. ಸಾಕಷ್ಟು ಜನ ಮಂತ್ರಿಗಳು, ಎಂ.ಎಲ್.ಎ.ಗಳಿಳಿಕಾರಿಗಳೂ ಹೋಗಿ ಹಾರತುರಾಯಿ ಹಾಕಿಸಿಕೊಂಡರು. ನನಗೆ ಜ್ಞಾಪಕ ಇರುವ ಹಾಗೆ ಒಂದು ಕಡೆ ಸರ್ಕಾರದವರು ಎರಡು ಮೂರು ಸೂಟ್‌ಕೇಸ್‌ಗಳನ್ನು ತಂದಿದ್ದರು. ಸುಮಾರು 3 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಆ ಪೆಟ್ಟಿಗೆಗಳಲ್ಲಿ ತುಂಬುವುದಕ್ಕೆ ಆಗದೆ ಗೋಣಿ ಚೀಲದಲ್ಲಿ ತುಂಬಿಕೊಂಡು ಹೋದರು. ಅಂದರೆ ದರೋಡೆ ಮಾಡಿ ಹೇಗೆ ತುಂಬಿಕೊಮಡು ಹೋಗುತ್ತಾರೆ ಆ ರೀತಿ ಗೋಣೀ ಚೀಲದಲ್ಲಿ ತುಂಬಿಕೊಂಡು ಹೋದರು. ಆವಾಗ ಸರ್ಕಾರದವರು ಎಷ್ಟು ಆಸೆಯಿಂದ ತುಂಬಿಕೊಂಡು ಹೋದರು. ಅಂದರೆ ದರೋಡೆ ಮಾಡಿ ಹೇಗೆ ತುಂಬಿಕೊಂಡು ಹೋಗುತ್ತಾರೆ ಆ ರೀತಿ ಗೋಣಿ ಚೀಲದಲಲಿ ತುಂಬಿಕೊಂಡು ಹೋದರು ಆವಾಗ ಸರ್ಕಾರದವರು ಎಷ್ಟು ಆಸೆಯಿಂದ ತುಂಬಿಕೊಂಡು ಹೋದರು. ಇದು ಯಾರ ಹಣ? ಇದು ಬಡವರು ಕಟ್ಟಿದ ಹಣವಲ್ಲವೇ? ಒಂದು ಕಡೆ ರೆಗ್ಯುಲರೈಜ್ ಮಾಡುತ್ತೇವೆಂದು ಸರ್ಕಾರದವರು ಬಡವರ ಕೈಯಿಂದ ದುಡ್ಡು ಕಿತ್ತುಕೋಂಡು ಹೋಗುವುದು, ಇನ್ನೊಂದು ಕಡೆ ಬಿ.ಡಿ.ಎ. ಯವರು ಬುಲ್ಡೋಜರ್ ತಂದು ಕಟ್ಟಿದ ಮನೆಗಳನ್ನು ಒಡೆದುಹಾಕುವುದು. ಇದು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ನಾನು ಕಳೆದ ಹತ್ತು ದಿನಗಳಿಂದ ನಿದ್ದೆ ಮಾಡಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೆ. ಅವತ್ತಿನ ದಿವಸ ದಲಿತರ ಬಹಳ ಮುಖ್ಯವಾದ ಸಭೆ ಇದ್ದುದರಿಂದ ನನಗೆ ಅವರನ್ನು ಭೇಟಿ ಮಾಡುವ ಅವಕಾಶ ಸಿಗಲಿಲ್ಲ. ಮತ್ತೆ ಸಮಯ ತೆಗೆದುಕೊಂಡು ಬನ್ನಿ ಎಂದು ಮುಖ್ಯಮಂತ್ರಿಯವರು. ಹೇಳಿದರು. ಸುಮಾರು ಐದಾರು ಸಾವಿರ ಜನ ಅಧಿಕಾರಿಗಳು ಮುಂತಾದವರಿಗೆ ಪ್ರತಿಭಟನೆ ಮಾಡಿದ್ದೇವೆ. ನಾಲ್ಕೈದು ಕಡೆ ರಸ್ತೆ ತಡೆ ಚಳುವಳಿ ಕೂಡ ಆಗಿದ್ದೆ. ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡತಕ್ಕಂಥ ಸುಮಾರು 40-50 ಸಾವಿರ ಜನ ಯಾರೂ ಸಹ ನಿದ್ದೆ ಮಾಡುತ್ತಿಲ್ಲ. ಸನ್ಮಾನ್ಯ ಮುದ್ದ ಹನುಮೇಗೌಡರ ಕ್ಷೇತ್ರದ ಸುಮಾರು 10 ಸಾವಿರ ಜನ ನನ್ನ ಕ್ಷೇತ್ರದಲ್ಲಿ ವಾಸಮಾಡುತ್ತಿದ್ದಾರೆ. ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ, ಮದ್ದೂರು ಈ ಎಲ್ಲಾ ಕಡೆಯ ಜನರು ನನ್ನ ಕ್ಷೇತ್ರದ ಬಾರ್ಡರ್‌ನಲ್ಲಿ ವಾಸ ಮಾಡುತ್ತಿದ್ದಾರೆ. ಅಂದರೆ ಶನಿವಾರದ ದಿವಸ ತಮ್ಮ ತಮ್ಮ ಹಳ್ಳಿಗಳಿಗೆ ಹೋಗುವುದಕ್ಕೆ ಅನುಕೂಲದ ದೃಷ್ಟಿಯಿಂದ ಕನಕಪುರದ ರಸ್ತೆಯ ಪಕ್ಕ ಕನಕಪುರದವರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಾರೆ, ಮಾಗಡಿಯವರು ಮಾಗಡಿಗೆ ಹೋಗುವ ರಸ್ತೆ ಪಕ್ಕದಲ್ಲಿ ವಾಸ ಮಾಡುತ್ತಾರೆ, ಹೀಗೆ ಅವರವರಿಗೆ ಹತ್ತಿರವಿರುವ ಕಡೆ ಮನೆಗಳನ್ನು ಕಟ್ಟಿಸಿಕೊಂಡು ವಾಸ ಮಾಡುತ್ತಿದ್ದಾರೆ. ಅಂದರೆ ಕರ್ನಾಟಕ ರಾಜ್ಯದ ಎಲ್ಲಾ ಭಾಗದ ಜನರು ನನ್ನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿಯ ಗ್ರಾಮಸ್ಥರು ನನಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ.

12.40 ಪಿ.ಎಂ.

ಬಿ.ಡಿ.ಎ. ನವರ ಮೂಲಭೂತ ಉದ್ದೇಶ ಲೇಔಟ್‌ಗಳನ್ನು ನಿರ್ಮಿಸಿ, ಸಾರ್ವಜನಿಕರಿಗೆ ವಿತರಣೆ ಮಾಡಿರುವುದು ಆಗಿರುತ್ತದೆ. ಈ ರೆವಿನ್ಯೂ ನಿವೇಶನಗಳಲ್ಲಿ ವಾಸಿಸುತ್ತಿರುವ ನಾವು ಸಹ ನಾಗರೀಕರಲ್ಲವೇ? ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದಾರೆ. ಇದೇ ರೀತಿಯಾಗಿ ಮತ್ತೊಂದು ಪ್ರಶ್ನೆ

ಏನೆಂದರೆ, ಈ ನಮ್ಮ ನಿವೇಶನಗಳು ಬಿ.ಡಿ.ಎ. ನವರು ಕಸಿದು ಕೊಂಡು ಮತ್ತೊಬ್ಬರಿಗೆ ನೀಡುವುದು ನ್ಯಾಯವೇ? ಸುಮಾರು ಇಪ್ಪತ್ತು ವರ್ಷಗಳಿಂದ ಯಾವುದೇ ಕ್ರಮವನ್ನು ಜರುಗಿಸದೇ ನಿವೇಶನಗಳನ್ನು ಮಂಜೂರು ಮಾಡದೇ ಇದ್ದ ಬಿ.ಡಿ.ಎ. ನವರು ಇದ್ದಕ್ಕಿದ್ದ ಹಾಗೆ ಕಡುಬಡವರಿಗೆ ಏಕಾಏಕಿಯಾಗಿ ಅನ್ಯಾಯ ಮಾಡುವುದು ನ್ಯಾಯವೇ ಎಂದು ನನ್ನ ಹತ್ತಿರ ಪ್ರಶ್ನೆ ಕೇಳಿದ್ದಾರೆ. 1977ನೇ ಇಸವಿಯಲ್ಲಿ ಅಕ್ವಿಸಿಷನ್ ಮಾಡಿದ್ದಾರೆ. ಇವತ್ತಿಗೆ 24 ವರ್ಷಗಳಾದವು, ಅಂದರ್ ಇಲ್ಲಿಯವರೆವಿಗೂ ಬಿ.ಡಿ.ಎ. ನವರು ಬಿ.ಟಿ.ಎಂ. ಲೇಔಟ್ ಕಡೆಗೆ ಹೆಜ್ಜೆಯೇ ಇಟ್ಟಿಲ್ಲ. ಇವತ್ತು ಒಂದೆ ಸಾರಿ ಪ್ರವೇಶಿಸಿ ಅಲ್ಲಿರುವಂತಹ ಮನೆಗಳನ್ನು ಒಡೆದು ಹಾಕಿದ್ದಾರೆ. ಒಬ್ಬರು ನಿವೃತ್ತರಾಗಿರತಕ್ಕಂಥ ಶ್ರೀಮತಿ ಕೃಷ್ಣವೇಣಿ ಎನ್ನುವವರು ನನ್ನ ಹತ್ತಿರ ಬಂದಿದ್ದರು. ಅವರು ಹೆಚ್.ಎ.ಎಲ್‌ಲನಲ್ಲಿ ಕೆಲಸ ಮಾಡುತ್ತಿದ್ದರು. ಇವರು ತಮ್ಮ ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ಸಂಪಾದಿಸಿದ ದುಡ್ಡನ್ನು ಕಟ್ಟಿ ಅಲ್ಲಿ ನಿವೇಶನ ತೆಗೆದುಕೊಂಡು ಮನೆಯನ್ನು ಕಟ್ಟಿದ್ದಾರೆ. ಇದಕ್ಕಾಗಿಯೆ ಅವರು ವಿಜಯ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಸುಮಾರು ಮೂರು ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡು ಮನೆಯನ್ನು ಕಟ್ಟಿಸಿ ಬೇರೆಯವರಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿನಂತೆ ಬಾಡಿಗೆ ಕೊಟ್ಟು ಇವರು ಸಾಲ ತೀರುವವರೆಗೆ ಸಣ್ಣ ಮನೆಯಲ್ಲಿ ಇರೋಣ ಎಂದು ತೀರ್ಮಾನಿಸಿ ತಿಂಗಳಿಗೆ ಐದನೂರು ರೂಪಾಯಿ ಬಾಡಿಗೆ ಕೊಟ್ಟುಕೊಂಡು ಇದ್ದಾರೆ . ಇವರ ಮನೆ ಒಡೆದು ಹಾಕಿರುವುದರಿಂದ ಇವರು ಹೇಗೆ ಸಾಲ ಕೊಟ್ಟಿರುವ ಬ್ಯಾಂಕಿಗೆ ಹಣ ವಾಪಸ್ ಕಟ್ಟುತ್ತಾರೆ? ಇಂಥ ಕ್ಲಿಷ್ಟಮಯವಾದ ಪರಿಸ್ಥಿತಿಯನ್ನು ಇವತ್ತು ಬಿ.ಡಿ.ಎ. ನವರು ತಂದ್ದಾರೆ. ಸರ್ಕಾರಕ್ಕೆ ನನ್ನ ಮನವಿ ಇಷ್ಟೇ ಬಿಡಿಎನಲ್ಲಿ ಟೌನ್‌ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು ಒಂದು ಆದೇಶವನ್ನು ಮಾಡಿದ್ದಾರೆ. ದೇವರ ಚಿಕ್ಕನಹಳ್ಳಿ ಗ್ರಾಮದಲ್ಲಿ ಹದಿನೈದು ಎಕರೆ ಮೂವತ್ತೆರಡು ಗುಂಟೆ ಮತ್ತು ಬಿಳೇರಿಹಳ್ಳಿ ಗ್ರಾಮದಲ್ಲಿ ನಲವತ್ತು ಎಕರೆ ಇದು ಅಭಿವೃದ್ಧಿಯಾಗಿದೆ, ಅಭಿವೃದ್ಧಿಯಾಗಿರುವುದರಿಂದ ನಾವು ಇದನ್ನು ಏನು ಮಾಡುವುದಕ್ಕೆ ಸಾಧ್ಯವಿಲ್ಲ, ದಯವಿಟ್ಟು ಇದನ್ನು ಬಿಟ್ಟುಬಿಡಬೇಕು ಎನ್ನುವಂತಹ ಮಾತನ್ನು ಬಿಡಿಎ ಟೌನ್ ಪ್ಲಾನಿಂಗ್, ನಗರ ಯೋಜನೆ ಸದಸ್ಯರು ಉಪ ಆಯುಕ್ತರು ಬೆಂಗಳೂರು ಮಹಾನಗರ ಪಾಲಿಕೆಯವರು ಆರ್ಡರ್ ಮಾಡಿದ್ದಾರೆ. ಇಲ್ಲೂ ಕೂಡ ಅವರು ಕಿರುಕುಳವನ್ನು ಕೊಡುತ್ತಿದ್ದಾರೆ. ಈ ರೀತಿಯಾದ ಅನೇಕ ಪ್ರಕರಣಗಳಿವೆ. 1996-97ರಲ್ಲಿ ಸುಮಾರು 333ಎಕರೆ 13 ಗುಂಟೆ ಅಕ್ವಿಸಿಷನ್ ಮಾಡಿದ್ದಾರೆ. ಇಷ್ಟು ವರ್ಷದಿಂದ ಬಿ.ಡಿ.ಎ ನವರು ಒಂದು ಸೈಟನ್ನು ಹಂಚಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಉದ್ದೇಶದಿಂದ ಸೈಟು ಹಂಚಬೇಕೆಂದು ಮಾತನಾಡಿದ್ದಾರೆ. ಆದರೆ ಇರುವ ಮನೆಯನ್ನು ಒಡೆದು ಬಿಟ್ಟು ಮತ್ತೊಬ್ಬರಿಗೆ ಅದನ್ನು ಕೊಟ್ಟರೆ ಸರ್ಕಾರದ ಉದ್ದೇಶ ಸಫಲವಾಗುತ್ತದೆಯೇ? ಈಗಾಗಲೇ ಸರ್ಕಾರದವರು 2,000 ಆಶ್ರಯ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿಯಾಗಿ ಸರ್ಕಾರ ಒಂದು ಸದುದ್ದೇಶದಿಂದ ಕೂಡಿದ ಕಾರ್ಯಕ್ರಮವನ್ನು ಹಾಕಿಕೊಂಡರೆ ಅದಕ್ಕೆ ವಿರುದ್ಧವಾಗಿ ಇವತ್ತು ಅಧಿಕಾರಿಗಳು ಮನೆಗಳನ್ನು ಒಡೆದುಹಾಕುತ್ತಿದ್ದಾರೆ ಇಂಥ ಸಂದರ್ಭದಲ್ಲಿ ಜನ ನನ್ನನ್ನು ಕೇಳಿದರು., ಏನೆಂದರೆ, ಸ್ವಾಮಿ ನಮಗೆ ಮನೆಗಳನ್ನು ಕೊಡಬೇಡಿ, ನಾವು ಕಟ್ಟಿಕೊಂಡಿರುವ ಮನೆಗಳನ್ನು ಉಳಿಸಿಕೊಡಿ ಎಂದು ಕೇಳುತ್ತಿದ್ದಾರೆ. ಆದ್ದರಿಂದ, ತಮ್ಮ ಮೂಲಕ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಏನು 50-60 ಮನೆಗಳನ್ನು ಒಡೆದು ಹಾಕಿದ್ದೀರಿ ಅಂಥವರಿಗೆ ಪೂರ್ಣ ಪರಿಹಾರವನ್ನು

ಕೊಡಬೇಕು. ಏಕೆಂದರೆ ಇವರು ಕೂಡ ಕೆನರಾ ಬ್ಯಾಂಕ್ ವಿಜಯ ಬ್ಯಾಂಕ್, ಸಹಕಾರಿ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ಮನೆಗಳನ್ನು ಕಟ್ಟಿರುವವರು ಇದ್ದಾರೆ. ಇಂಥವರ ಮನೆಗಳನ್ನು ನೀವು ಏಕಾಏಕಿ ಒಡೆದು ಹಾಕಿದರೆ ಅವರು ಹೇಗೆ ಸಾಲ ವಾಪಸ್ ಮಾಡುತ್ತಾರೆ? ಸಾಲ ಕೊಟ್ಟಿರುವ ಸಂಸ್ಥೆಗಳು ದಿವಾಳಿಯಾಗುತ್ತವೆ. ಇವರು ಕೂಡ ನಗರ ಪಾಲಿಕೆಗೆ ಹಣ ಕಟ್ಟಿದ್ದಾರೆ, ಬೆಟರ್‌ಮೆಂಟ್ ಚಾರ್ಜ್ ಕಟ್ಟಿದ್ದಾರೆ. ಆದ್ದರಿಂದ, ಇವತ್ತು ಯಾರ್ಯಾರ ಮನೆಗಳನ್ನು ಒಡೆದು ಹಾಕಿದ್ದೀರಿ ಅವರಿಗೆ ಪೂರ್ತಿ ಹಣವನ್ನು ಸರ್ಕಾರದ ದರದಲ್ಲಿ ಕೊಡಬೇಕು. ಕಟ್ಟಿರುವ ಮನೆಯನ್ನು ಒಡೆದು ಮತ್ತೊಬ್ಬನಿಗೆ ಮನೆ ಕೊಟ್ಟರೆ ಸರ್ಕಾರದ ಉದ್ದೇಶ ಏನು ಸಾಫಲ್ಯವಾಗುವುದಿಲ್ಲ. ಒಬ್ಬನನ್ನು ಹಾಳೂ ಮಾಡಿ, ನಿರ್ಗತಿಕನನ್ನಾಗಿ ಮಾಡಿ, ಮತ್ತೊಬ್ಬನಿಗೆ ಮನೆ ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ. ಯಾವುದೋ ಒಂದು ಆಸ್ಪತ್ರೆಗಾಗಲಿ, ಬ್ರಿಡ್ಜ್ ಕಟ್ಟುವುದಕ್ಕಾಗಲಿ ಅಥವಾ ಡ್ಯಾಂ ಕಟ್ಟುವುದಕ್ಕಾಗಲಿ ಅಕ್ವೈರ್ ಮಾಡಿದರೆ ಲಕ್ಷಾಂತರ ಜನರಿಗೆ ಉಪಯೋಗವಾಗುತ್ತದೆ. ಆದರೆ ಒಬ್ಬನ ಮನೆಯನ್ನು ಒಡೆದು ಇನ್ನೊಬ್ಬನಿಗೆ ಮನೆ ಕೊಟ್ಟರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ? ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ ಈ ಅಕ್ರಮವನ್ನು ಕೂಡಲೇ ನಿಲ್ಲಿಸಬೇಕು. ಏಕೆಂದರೆ, ಕಳೆದ ಹದಿನೈದು ದಿನಗಳಿಂದ ಬೆಂಗಳೂರಿನ ನಾಗರೀಕರು ಭಯಭೀತರಾಗಿದ್ದಾರೆ. ಸುಮಾರು ಒಂದೂವರೆ ಲಕ್ಷ ಜನ ರೆವಿನ್ಯೂ ಸೈಟ್‌ನಲ್ಲಿ ವಾಸಮಾಡುವಂತಹ ನಾಗರೀಕರು ಇವತ್ತು ಭಯಭೀತರಾಗಿದ್ದಾರೆ. ಅದ್ದರಿಂದ, ಈ ಜನಗಳಿಗೆಲ್ಲಾ ಈ ಸದನದ ಮೂಲಕ ಆಶ್ವಾಸನೆ ಹೋಗಬೇಕು. ನೀವು ಕಟ್ಟಿರುವಂತಹ ಮನೆಗಳಿಗೆ ಯಾವುದೇ ರೀತಿಯಿಂದ ತೊಂದರೆ ಕೊಡುವುದಿಲ್ಲ ಎನ್ನುವಂತಹ ಒಂದು ಸಂದೇಶ ಈ ಸದನದ ಮೂಲಕ ಹೋದರೆ ಆ ಜನಗಳಿಗೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅನುಕುಲವಾಗುತ್ತದೆ, ಆದ್ದರಿಂದ ಈ ನೆಮ್ಮದಿಯನ್ನು ಆ ಜನಗಳಿಗೆ ಕಲ್ಪಿಸಿಕೊಡಬೇಕು ಎಂದು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರು ನಾನು ಈ ಹಿಂದೆ ಇದರ ಬಗ್ಗೆ ಬಿಲ್ ತಂದಿದ್ದಾಗ ನನ್ನ ಸಲಹೆ ಕೇಳಿದ್ದರೆ ಇವತ್ತಿನ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳ ಅನುಭವದಷ್ಟು ನಮಗೆ ವಯಸ್ಸಾಗಿಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲಹೆ ಕೊಡುವಂತಹ ಪರಿಸ್ಥಿತಿಯಲ್ಲಿಲ್ಲ. ನಾನು ಈ ಹಿಂದೆ ಇದರ ಬಗ್ಗೆ ಬಿಲ್ ತಂದಿದ್ದಾಗ ಇದಕ್ಕೆ ಯಾವುದೇ ರೀತಿಯ ವಿರೋಧ ಮಾಡದೇ ನನ್ನ ಸಲಹೆಯನ್ನು ಕೇಳಿದ್ದರೆ ಇವತ್ತು ಬೆಂಗಳೂರಿನ ನಾಗರೀಕರಿಗೆ ಈ ರೀತಿಯಾದ ವಿಪರ್ಯಾಸ ಉಂಟಾಗುತ್ತಿರಲಿಲ್ಲ. ಅಂದಿನ ಸರ್ಕಾರ ಹೈಕೋರ್ಟ್‌ನ ಸೂಚನೆಯ ಮೇರೆಗೆ ಒಂದು ಸಮಿತಿಯನ್ನು ಮಾಡಿತ್ತು. ಇವತ್ತು ಏನು ಡೀನೋಟಿಫಿಕೇಷನ್ ಎಂದು ಮಾಡುತ್ತಿದ್ದಾರೆ ಅದಕ್ಕೆ ಹೈಕೋರ್ಟ್‌ನಲ್ಲಿ ಒಂದು ಆದೇಶ ಮಾಡಿದರು. ಏನೆಂದರೆ ಡೀನೋಟಿಫಿಕೆಷನ್ ಮಾಡುವುದಕ್ಕೆ ಸರ್ಕಾರಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ. ಈ ಅಧಿಕಾರ ಬರಬೇಕಾದರೆ ಕಾನೂನನ್ನು ತಿದ್ದುಪಡಿಮಾಡಿಕೊಳ್ಳಿ ಎಂದು ಹೇಳಿದ ಮೇರೆಗೆ 1994ರಲಲಿ ಅಂದು ಇದ್ದಂಥ ಮುಖ್ಯಮಂತ್ರಿಗಳು ಒಂದು ಆದೇಶವನ್ನು ಮಾಡಿ ತಿದ್ದುಪಡಿ ತಂದು ಕೆಲವು ದೊಡ್ಡ ದೊಡ್ಡ ಸೈಟುಗಳನ್ನು ಕನ್‌ಫರ್ಮ್ ಮಾಡಿದ ಮೇಲೆ ಸಮಿತಿ ರಚನೆ ಮಾಡಿದರು. ಸಮಿತಿಯವರು ಸುಮಾರು 36-40 ಸಾವಿರ ಅರ್ಜಿಗಳನ್ನು ಕರೆದರು. ಕೆಲವು ಜನರು

ಇದು ಕೂಡ ಸುಳ್ಳು ಎಂದು ಭಾವಿಸಿ ಅರ್ಜಿಯನ್ನು ಹಾಕಿರಲಿಲ್ಲ. ಮಾನ್ಯ ವೀರಪ್ಪ ಮೊಯಿಲಿವರು ಸ್ವತಃ ಉಚ್ಚನ್ಯಾಯಾಲಯದ ಆದೇಶಕ್ಕೆ ಮನ್ನಣೆ ನೀಡಿ ಒಂದು ಕಾನೂನು ಮಾಡಿ ಸೆಕ್ಷನ್ 38ಸಿ ಎಂದು ಮಾಡಿ ಅದರ ಮುಖೇನ ಕೆಲವು ಸೈಟುಗಳನ್ನು ಕನ್‌ಫರ್ಮ್ ಮಾಡಿದ್ದರು. ಯಾರ‍್ಯಾರೊಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಆಗಿಲ್ಲವೋ ಅವರೆಲ್ಲರೂ ಕೂಡ ಅರ್ಜಿ ಹಾಕಿಕೊಳ್ಳಿ ಎಂದು ಹೇಳಿದಾಗ ಕೆಲವು ಫಲಾನುಭವಿಗಳು ನಮಗೆ ಸೈಟು ಸಿಕ್ಕಿಲ್ಲ ನಾವು ಕೂಡ ಅರ್ಜಿ ಹಾಕಿ ಕೊಳ್ಳ ಬಹುದಾ ಎಂದು ಅಂದು ನಾವು 20x30, 30x40, 40x60, ಅಳತೆಯ ಸೈಟುಗಳನ್ನು ಪಡೆದಿರತಕ್ಕಂಥ ಯಾರು ನಾಗರೀಕರು ಇದ್ದಾರೆ ಇವರಿಗೆಲ್ಲಾ ಕಾನೂನು ಚೌಕಟ್ಟಿನೊಳಗೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಸೆಕ್ಷನ್ 38(ಡಿ) ಎನ್ನುವುದನ್ನು ನಾವು ಆ ದಿನ ಇಂಟ್ರಡ್ಯೂಸ್ ಮಾಡಿದಾಗ, ಮಾನ್ಯ ಸಿಂಧ್ಯರವರನ್ನು ಬಿಟ್ಟು, ಇವತ್ತು ಅಲ್ಲಿ ಯಾರು ಮನೆಗಳನ್ನು ಒಡೆದು ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ ಅವರೆಲ್ಲರೂ ಆದಿನ ನನ್ನ ಮಾತನ್ನು ಕೇಳಿದ್ದರೆ ಈ ಒಂದು ವಿಪರ್ಯಾಸಕ್ಕೆ ಅವಕಾಶ ಆಗುತ್ತಿರಲಿಲ್ಲ. ಆ ದಿನ ಇವರೆಲ್ಲರೂ ಕೂಡಿ ಗೊಂದಲವನ್ನುಂಟು ಮಾಡಿ ಇದರಲ್ಲಿ ಏನೋ ಆಗುತ್ತದೆ, ಸೋಮಣ್ಣನವರು ಇದರಲ್ಲಿ ಏನೋ ದೊಡ್ಡ ದೊಡ್ಡ ವ್ಯವಹಾರ ಮಾಡಿಕೊಂಡಿದ್ದಾರೆಂದು ಹೇಳಿದಂಥವರು ಇವತ್ತು ಒಳ್ಳೆಯ ಮಾತನ್ನು ಆಡುತ್ತಿದ್ದಾರೆ. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದು ಏನೆಂದರೆ , ಇದೊಂದು ಕ್ಯಾನ್ಸರ್ ಖಾಯಿಲೆ ಇದು ಇವತ್ತಿನ ಅಥವಾ ನಿನ್ನೆಯ ಸಮಸ್ಯೆಯಲ್ಲ ಅಥವಾ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾದ ಕಾಲದಲ್ಲಿ ಉಂಟಾಗಿರುವ ಸಮಸ್ಯೆಯಲ್ಲ; ಸುಮಾರು 1970ನೇ ಇಸವಿಯಿಂದಲೂ ಈ ಸಮಸ್ಯೆ ಇದೆ. ಇದರಲ್ಲಿ ನ್ಯೂ ಸ್ಕೀಮ್ ಮತ್ತು ಓಲ್ಡ್ ಸ್ಕೀಮ್‌ಗಳೆರಡನ್ನು ತೆಗೆದುಕೊಂಡು ನ್ಯೂ ಸ್ಕೀಮ್‌ನಲ್ಲಿರತಕ್ಕಂಥ ಕೆಲವು ಕಡೆ ಎಲ್ಲೆಲ್ಲಿ ಮನೆಗಳನ್ನು ಕಟ್ಟಿದ್ದರೋ ಅದನ್ನು ಕೂಡ ಅಕ್ವೀಸಿಷನ್ ಮಾಡಿಕೊಂಡರು. ಮನೆಗಳು ಇರುತ್ತವೆ ಎಂದು ಅಧಿಕಾರಿಗಳಿಗೆ ಗೊತ್ತಿದ್ದರೂ ಆದಿನ ಅಕ್ವಿಸೇಷನ್ ಮಾಡಿಕೊಂಡರು. ಮತ್ತು ವಿಪರ್ಯಾಸ ಏನೆಂದರೆ ಗ್ರಾಮಠಾಣ ಇದ್ದರೂ ಕೂಡ 3-4 ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಂದೊಂದು ಖಾತೆಗಳನ್ನು ಮಾಡಿಕೊಟ್ಟರು. ಇದಕ್ಕೆ ಬಿಡಿಎನ ಕೆಲವು ಅಧಿಕಾರಿಗಳು ಹಾಗೂ ರೆವಿನ್ಯೂ ಇಲಾಖೆಯಿಂದ ಎರವಲು ಸೇವೆಯ ಮೇರೆಗೆ ಅಲ್ಲಿಗೆ ಹೋಗಿರತಕ್ಕಂಥ ಕೆಲವು ಅಧಿಕಾರಿಗಳ ಉದ್ಧಟತನದಿಂದಾಗಿ ಈ ಒಂದು ಕೆಲಸವಾಗಿದೆ. ಅದಕ್ಕಾಗಿ ಆಗ ನಾವು ಒಂದು ಸಮಿತಿಯನ್ನು ಮಾಡಿದ್ದೆವು. ಬಹುಶಃ ಬೆಂಗಳೂರು ಮಹಾನಗರ ಪಾಲಿಕೆಯ ಕಮೀಷನರ್ ಆಗಿ ಮಾನ್ಯ ರವೀಂದ್ರರವರು ಇದ್ದಂಥ ಸಂದರ್ಭದಲ್ಲಿ ಅವರ ಟಪ್ಪಣಿಯ ಮೇರೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ರೀತಿ ಆಗಿದೆ, ಈಗಾಗಲೇ ಕೆಲವರು ಮನೆ ಕಟ್ಟಿಕೊಂಡಿದ್ದಾರೆ. ಅಕ್ವೀಜಿಸನ್ ಆಗಿದೆ. ಆದರೆ ಅಕ್ವಿಷನ್ ಅವಾರ್ಡ್ ಆಗುವುದಕ್ಕಿಂತ ಮುಂಚೆ ಹಣ ತೆಗೆದುಕೊಂಡಿಲ್ಲ, ಬೇರೆಯವರು ಮನೆ ಕಟ್ಟಿದ್ದಾರೆ, ಇದಕ್ಕೇನು ಮಾಡಬೇಕು ಎಂದಾಗ, ಮಾನ್ಯ ರವೀಂದ್ರವರು ಸರ್ವೆ ಮಾಡಿಸಿದರು. ಸುಮಾರು 56-60 ಸಾವಿ ಏನು ಅರ್ಜಿಗಳು ಇದ್ದವು ಇವುಗಳನ್ನು ಗಮನದಲ್ಲಿಟ್ಟುಕೊಂಡು 20x30, 30x40, 40x60, ಅಳತೆಯ ಸೈಟುಗಳಲ್ಲಿ ಯಾರು ಮನೆಗಳನ್ನು ಕಟ್ಟಿದ್ದಾರೆ, ಅಂಥವರನ್ನು ಗುರುತಿಸಿ, ಇನ್ನು ಮುಂದೆ ಮನೆ ಕಟ್ಟದಂತೆ ನೋಡಿಕೊಳ್ಳಿ ಎಂದು ನಾವು ಬಿಗಿ ಮಾಡುವುದಕ್ಕೆ ಹೋದೆವು. ಯಾವುದೇ ಸರ್ಕಾರಗಳು ಬಂದರೂ ಕೂಡ ಅಧಿಕಾರಿಗಳು ಮಾತ್ರ ಇದ್ದವರೇ ಇರುತ್ತಾರೆ. ಮಾನಯ ಕೃಷ್ಣರವರು ಬಂದ ತಕ್ಷಣ ಇಲ್ಲಿರುವ

ಅಧಿಕಾರಿಗಳು ಅಂಡಮಾನ್‌ಗೆ ಕಳುಹಿಸಿ ಅಲ್ಲಿರುವ ಅಧಿಕಾರಿಗಳನ್ನು ಇಲ್ಲಿಗೆ ತರುವುದಕ್ಕೆ ಆಗುವುದಿಲ್ಲ. ಅಂದು ಇದ್ದಂಥ ಅಧಿಕಾರಿಗಳ ಉದ್ದಟತನದಿಂದಾಗಿ ಈ ರೀತಿ ಆಗಿದೆ. ನ್ಯೂಸ್ಕೀಮ್ ಮತ್ತು ಓಲ್ಡ್ ಸ್ಕೀಮ್‌ನಲ್ಲಿ ಆಗಿರುವಂತಹ ಅನಾಹುತದಿಂದ ಈ ರೀತಿಯಾದ ವ್ಯವಸ್ಥೆಯಾಗಿದೆ. ಮಾನ್ಯ ಅಶೋಕ್‌ರವರು, ಮಾನ್ಯ ಸುರೇಶ್ ಕುಮಾರ್ ರವರು, ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಸಿ ಎಂಸಿ ಯವರು ಖಾತೆ ಮಾಡಿದ್ದಾರೆ, ಬೆಂಗಳೂರು ಮಹಾನಗರ ಪಾಲಿಕೆ ಯವರು ಖಾತೆ ಮಾಡಿದ್ದಾರೆ. ಒತ್ತುವರಿಯಾಗಿರತಕ್ಕಂಥ ಜಾಗಗಳಿಗೆ ಯಾವುದೇ ಕಾರಣಕ್ಕೂ ಖಾತೆ ಮಾಡಬಾರದೆಂದು ಒಂದು ಸ್ಪಷ್ಟವಾದ ನಿರ್ದೇಶನ ಇದೆ. ಬೆಂಗಳೂರು ನಗರಕ್ಕೆ ಸೇರತಕ್ಕಂಥ ಜಾಗಗಳು ಬಿಟ್ಟು ಹೋಗಿದ್ದ ಪಕ್ಷದಲ್ಲಿ ಅಂಥವುಗಳಿಗೆ ಖಾತೆ ಮಾಡಿಕೊಡಿ ಎಂದು ಹೇಳಿದರೆ, ಅವರು ಎಲ್ಲಿಯೋ ಒಂದು ಕಡೆ ಇರತಕ್ಕಂಥ ಜಮೀನಿಗೆ ಖಾತೆ ಮಾಡಿಕೊಡುತ್ತಿರುವುದು ಸತ್ಯವಾದ ಸಂಗತಿಯಾಗಿದೆ. ದಿನಾಂಕ 01-04-2000ದಂದು ನಡೆದಂತಹ ವಿಷಯವನ್ನು ಸನ್ಮಾನ್ಯ ಸುರೇಶ್ ಕುಮಾರ್‌ರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನನಗೆ ಈ ವಿಚಾರ ರಾತ್ರಿ ತಿಳಿದ ತಕ್ಷಣವೇ ಸಂಬಂಧಪಟ್ಟ ಆಯುಕ್ತರನ್ನು ಮತ್ತು ಕೆಲವು ಅಧಿಕಾರಿಗಳನ್ನು ಭೇಟಿ ಮಾಡಿದೆ. ಒತ್ತುವರಿಯಾಗಿರತಕ್ಕಂಥ ಜಾಗದಲ್ಲಿರುವ ಮನೆಗಳನ್ನು ಮಾತ್ರ ತೆಗೆಯುತ್ತಿದ್ದು, ಯಾವುದೇ ಕಾರಣಕ್ಕೂ ಸಹ ದೊಡ್ಡ ದೊಡ್ಡ ಮನೆಗಳನ್ನು ತೆಗೆಯುವುದಿಲ್ಲವೆಂದು ಆ ಸಂದರ್ಭದಲ್ಲಿದ್ದಂಥ ಅಧಿಕಾರಿಗಳು ಹೇಳಿದರು. ಆದರೆ ಇವತ್ತಿನ ದಿವಸ ಬಿ.ಟಿ.ಎಂ. ಬಡಾವಣೆಯಲ್ಲಿ ಮತ್ತು ಇನ್ನು ಕೆಲವು ಜಾಗಗಳಲ್ಲಿರತಕ್ಕಂಥ ಮನೆಗಳನ್ನು ಒಡೆದು ಹಾಕಿರುವುದು ನಿಜ. ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಬೆಂಗಳೂರು ನಗರದ ಒಬ್ಬ ಶಾಸಕನಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದೊಂದು ಕ್ಯಾನ್ಸರ್ ಖಾಯಿಲೆ ಇದ್ದಂತೆ. ಬೆಂಗಳೂರು ನಗರದಲ್ಲಿ ರಸ್ತೆಗಳ ಮಧ್ಯೆ ಮತ್ತು ಪಾರ್ಕ್‌ಗಳನ್ನು ಹಾಗೂ ಸಾರ್ವಜನಿಕರಿಗೆ ವಿತರಣೆ ಮಾಡಿರಕ್ಕಂಥ ಜಾಗದಲ್ಲಿ ಮನೆಗಳನ್ನು ಕಟ್ಟಿರುವಂಥದ್ದನ್ನು ನಿರ್ದಾಕ್ಷಿಣ್ಯವಾಗಿ ಒಡೆದು ಹಾಕುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ ಆದ್ದರಿಂದ ಇದಕ್ಕೊಂದು ಸಮಿತಿಯನ್ನು ಮಾಡಿ. ಈ ಸಮಿತಿಗೆ ಅಧಿಕಾರಿಗಳು ಅಥವಾ ಯಾರನ್ನಾದರೂ ಸೇರಿಸಿಕೊಳ್ಳುವುದು. ತಮಗೆ ಬಿಟ್ಟ ವಿಷಯವಾಗಿದೆ. ಕೆಲವು ಕಡೆ 90 ಪರ್ಸೆಂಟ್‌ನಷ್ಟು ಮನೆಗಳನ್ನು ಕಟ್ಟಿದ್ದು, ಉಳಿದ ಖಾಲಿ ಸೈಟ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಿ. ಆದರೆ ಮನೆಗಳನ್ನು ಒಡೆದು ಹಾಕುವಂತಹ ಪ್ರಯತ್ನ ಮಾಡುವುದು ಬೇಡ. ಆದ್ದರಿಂದ, ಸಮಿತಿಯು ಪೂರ್ವಪೀಡಿತವಾದ ಈ ಕಾಯಿಲೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲನೆ ಮಾಡಿ ಇದಕ್ಕೊಂದು ಮೋಕ್ಷ ಸಿಗುವಂತೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಿ.ಟಿ.ಎಂ. ಬಡಾವಣೆಯಲ್ಲಿ ಮನೆಗಳನ್ನು ಒಡೆದು ಹಾಕುವಂತಹ ಸಂದರ್ಭದಲ್ಲಿ ಬಿಡಿಎ ಅಧಿಕಾರಿಯ ಮನೆಯೆಂದು ಹೇಳಿದ್ದಾರೆ. ಇಲ್ಲಿತಕ್ಕಂಥ ಅಧಿಕಾರಿಗಳ ಅವ್ಯವಸ್ಥೆಯಿಂದಲೇ ಇಷ್ಟಕ್ಕೆಲ್ಲಾ ಮುಖ್ಯ ಕಾರಣವಾಗಿದೆಯೇ ಹೊರತು ಬೇರೆ ಯಾರಿಂದಲೂ ಆಗಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಕಾಯಿದೆಯನ್ನು ಹಿಂದನ ಸರ್ಕಾರ ತಂದಂಥ ಸಂದರ್ಭದಲ್ಲಿ ಎಲ್ಲರೂ ಕೂಡ ವಿರೋಧ ಮಾಡಿದರು. ಸನ್ಮಾನ್ಯ ಮುದ್ದಹನುಮೇಗೌಡರ ಕ್ಷೇತ್ರದ ಜನರು ಬೆಂಗಳೂರಿನಲ್ಲಿದ್ದರೂ ಸಹ ಇದಕ್ಕೆ ಅವರು ಅವರ ವಿರೋಧ ಮಾಡಿದರು. ಮೇಲ್ಮನೆಯಲ್ಲಿ ಇದಕ್ಕೋಸ್ಕರ ಒಂದು ವಿಶೇಷವಾದಂತಹ ಅಧಿವೇಶನವನ್ನು ಮಾಡಿದರು. ಅನಂತರ ಮಾನ್ಯ ರಾಜ್ಯಪಾಲರಿಗೆ ಒಂದು ಮನವಿಯನ್ನು ಕೊಟ್ಟರು.

ರಾಜ್ಯಪಾಲರು ರಾಷ್ಟ್ರಪತಿಯವರಿಗೆ ಕಳುಹಿಸಿಕೊಟ್ಟರು, ಮಾನ್ಯ ರಷ್ಟ್ರಾಪತಿಗಳು ಮಾನವೀಯತೆಯ ದೃಷ್ಟಿಯಿಂದ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದು ಈಗ ಇಲ್ಲಿಗೆ ಬಂದಿದ್ದು, ಇದನನು ಮಾಡುತ್ತಿರುವುದು ಸರಿ ಎಂದು ಹೇಳುತ್ತಾ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಯಾವುದೇ ಸರ್ಕಾರ ಬರಲಿ ಅಥವಾ ಹೋಗಲಿ, ಇವತ್ತು ಇರತಕ್ಕಂಥ ಜನರಿಗೆ ಆಗತಕ್ಕಂಥ ಜನರಿಗೆ ಆಗತಕ್ಕಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಅವರ ದೊಡ್ಡ ಹೃದಯ ಶ್ರೀಮಂತಿಕೆಯನ್ನು ತೋರಿಸುತ್ತದೆ ಎನ್ನತಕ್ಕಂಥ ಮಾತನ್ನು ಹೇಳೂತ್ತಾ. ಇದಕ್ಕೊಂದು ಸಮಿತಿ ಮಾಡಿ; ಸಮಿತಿ ಕೊಡತಕ್ಕಂಥ ವರದಿಯನ್ನು ತೆಗೆದುಕೊಂಡು ಇದನ್ನು ಕನ್ ಫರ್ಮ್ ಮಾಡಬೇಕೇ ಅಥವಾ ಬೇಡವೇ ಎಂಬುದನ್ನು ತೀರ್ಮಾನ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅಮೆಂಡ್‌ಮೆಂಟನ್ನು ನಾವು ಟೋಟಲ್ ಆಗಿ ವಿರೋಧ ಮಾಡಿಲ್ಲ. ಆದರೆ, ಅದರಲ್ಲಿರತಕ್ಕಂಥ ಕೆಲವು ನ್ಯೂನ್ಯತೆಗಳನ್ನು ಎತ್ತಿ ಹೇಳಿದ್ದೇವೆಯೇ ವಿನಃ ಇದಕ್ಕೆ ಪೂರ್ಣವಾಗಿ ವಿರೋಧ ಮಾಡಿಲ್ಲ. ಇದರಲ್ಲಿ ನಮ್ಮ ತಾಲ್ಲೂಕಿಗೆ ಸೇರಿದವರ ಮನೆಗಳು ಹೋಗಲಿ ಎನ್ನುವ ಉದ್ದೇಶದಿಂದ ಹೇಳಿದ್ದಲ್ಲ. ನಿಮ್ಮ ತಾಲ್ಲೂಕಿನಲ್ಲಿರತಕ್ಕಂಥ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಅಲ್ಲಿಯೇ ಇರಬೇಕೆಂದು, ನಾನು ಕುಣಿಗಲ್ ಕ್ಷೇತ್ರದ ಶಾಸಕನಾಗಿದ್ದರೂ ಕೂಡ ನನ್ನ ತಾಲ್ಲೂಕಿನ ಜನರಿಗೂ ರಕ್ಷಣೆ ಕೊಡಬೇಕೆಂಬ ದೃಷ್ಟಿಯಿಟ್ಟು ಕೊಂಡು ಈ ಬಿಲ್ಲಿನಲ್ಲಿರತಕ್ಕಂಥ ಕೆಲವು ನ್ಯೂನ್ಯತೆಗಳಿಗೆ ನಾವು ವಿರೋಧ ಮಾಡಿದ್ದೇವಷ್ಟೆ

ಶ್ರೀ ಎಸ್.ಸುರೇಶ್ ಕುಮಾರ್: ನಾವು ವಿರೋಧಪಕ್ಷದಲ್ಲಿದ್ದುಕೊಂಡು ನಮ್ಮ ಪ್ರಾಮಾಣಿಕ ಕರ್ತವ್ಯವನ್ನು ಆಗಲೂ ಮಾಡುತ್ತಿದ್ದೆವು, ಈಗಲೂ ಸಹ ಮಾಡುತ್ತಿದ್ದೇವೆ. ನಾವೇನು ರೂಲಿಂಗ್ ಪಾರ್ಟಿಗೆ ಹೋಗಿ ಸೇರಿಕೊಂಡಿಲ್ಲ. ನಾವು ವಿರೋಧಪಕ್ಷದಲ್ಲಿದ್ದುಕೊಂಡು ನಮ್ಮ ಪ್ರಾಮಾಣಿಕ ಕೆಲಸವನ್ನು ಮಾಡುತ್ತಾ ಹೋಗುತ್ತಿದ್ದೇವೆ

ಶ್ರೀ ವಿ.ಸೋಮಣ್ಣ : ನನ್ನ ಹಾಗೆ ಸ್ವತಂತ್ರಯ ಪಕ್ಷದಲ್ಲಿದ್ದು ಬೆಂಗಳೂರು ನಗರದಲ್ಲಿ ಚುನಾವಣೆಯಲ್ಲಿ ಗೆಲ್ಲುವುದು ಭಾರಿ ಕಷ್ಟವಿದೆ. 50 ವರ್ಷದ ಇತಿಹಾಸದಲ್ಲಿ ಬೆಂಗಳೂರು ನಗರದಲ್ಲಿ ನನ್ನ ತರಹ ಯಾರೂ ಗೆದ್ದಿಲ್ಲ ನಾನು ಯಾವುದೇ ಪಾರ್ಟಿಯ ಫೋಟೋವನ್ನು ಇಟ್ಟುಕೊಂಡು ಗೆದ್ದಿಲ್ಲ ಸ್ವತಃ ನನ್ನ ಫೋಟೋ ಹಾಕಿಕೊಂಡು ಚುನಾವಣೆಯಲ್ಲಲಿ ಗೆದ್ದು ನನಗೆ ಇಷ್ಟವಾದ ಕಡೆ ಹೋಗಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಾಡಿರತಕ್ಕಂಥ ಕೆಲಸದ ಬಗ್ಗೆ ಒಳ್ಳೆಯ ಗೌರವವನು ಇಟ್ಟುಕೋಂಡು ಈ ಪಕ್ಷದ ಕಡೆಗೆ ನಾನು ಹೋಗಿದ್ದೇನೆ. ಇದನ್ನು ಪ್ರಶ್ನೆ ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲ.

ಅಧ್ಯಕ್ಷರು: ಯಾವ ಪಾರ್ಟಿಗೆ ಹೋಗಬೇಕೆಂದು ನಿಧರಿಸುವುದಕ್ಕೆ ಅವರಿಗೆ ಹಕ್ಕಿದೆ. ಆದ್ದರಿಂದ ಯಾವುದೇ ಪಾರ್ಟಿಯ ವಿಷಯ ಇಲ್ಲಿ ಮಾತನಾಡುವುದು ಬೇಡ.

ಶ್ರೀ ವಿ.ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಅವರು ಸಹ ಸ್ವತಂತ್ರ ಪಕ್ಷದಲ್ಲಿ ನಿಂತು ಕೊಂಡು ಐದು ಸಾವಿರ ಓಟುಗಳನ್ನು ತೆಗೆದುಕೊಳ್ಳಲಿ, ಆಮೇಲೆ ನಾನು ಮಾತನನಾಡುತ್ತೇನೆ. ಬೆಂಗಳೂರು ನಗರದ ಒಬ್ಬ ಶಾಸಕನಾಗಿ, ಪ್ರಜೆಯಾಗಿ ಈ ಕಾನೂನನ್ನು ತಂದಿದ್ದೇನೆ ಎಂಬ ಉದ್ದೇಶ ನನಗಿಲ್ಲ.

ಇವತ್ತಿನ ದಿವಸ ಬಡವ, ಕಟು ಬಡವ ಮತ್ತು ಸಮಾಜದ ತುಳಿತಕ್ಕೆ ಒಳಪಟ್ಟಿರುವವರು ಹಾಗೂ ಮಧ್ಯಮ ವರ್ಗದವರು ಯಾರಿದ್ದಾರೆ ಅವರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಇದನ್ನು ಮಾಡಿದ್ದೇವೆ. ಈ ದಿನ ಯಾವ ಜನ ಇದನ್ನು ಬೇಡವೆಂದು ಹೇಳುತ್ತಿದ್ದಾರೆಯೋ ಆ ದಿನ ಏತಕ್ಕಾಗಿ ಬೇಕೆಂದು ಹೇಳಿದರು ಎಂಬುದನ್ನು ಜನರು ತೀರ್ಮಾನ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಇದಕ್ಕೊಂದು ಸಮಿತಿಯನ್ನು ಮಾಡಿ, ಇವತ್ತಿನ ದಿವಸ ಆಗಿರತಕ್ಕಂಥ ಅಜಾಗರೂತತೆಯನ್ನು ತಪ್ಪಿಸುವುದಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅನುಭವದ ಚಿಂಥನೆಯನ್ನು ಮಾಡಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್): ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. 1953ನೇ ಇಸವಿಯಲ್ಲಿ ನಾನು ಕಾಲೇಜು ಸೇರುವುದಕ್ಕೆ ಬೆಂಗಳೂರಿಗೆ ಬಂದ್ದಿದೆ. ಅವತ್ತಿನ ಬೆಂಗಳೂರು ಮತ್ತು ಇವತ್ತಿನ ಬೆಂಗಳೂರಿನ ಚಿತ್ರ ನೋಡಿದರೆ ಭೂಮಿ ಆಕಾಶದ ವ್ಯತ್ಯಾಸವನ್ನು ನಾವು ಬೆಂಗಳೂರಿನಲ್ಲಿ ಕಾಣುತ್ತಿದ್ದೇವೆ. ಈ ಸಂದರ್ಭದಲಲಿ ಈ ವಿಚಾರದ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಪ್ರಸ್ತುತ ಇರತಕ್ಕಂಥ ವಿಚಾರ ಏನೆಂದರೆ ಕೆಲವು ದಿವಸಗಳಿಂದ ಬೆಂಗಳೂರಿನ ಸುತ್ತ ಮುತ್ತಲೂ ಇರತಕ್ಕಂಥ ಕೆಲವು ಬಡಾವಣೆಗಳಲ್ಲಿರತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಈ ವಿಷಯದ ಬಗ್ಗೆ ನಮ್ಮ ಅನೇಕ ಸ್ನೇಹಿತರು ವಿರೋಧ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಯಾವುದು ಕಾನೂನು ಬದ್ಧವಾಗಿದೆಯೋ ಅಂಥವುಗಳನ್ನು ಸಹ ಒ--ಯುತತದಾರೆ ಎನ್ನತಕ್ಕಂಥ ಪ್ರಮುಖವಾದಂಥ ಅಂಶ ಇಲ್ಲಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದೇ ಒಂದು ಉದಾಹರಣೆ ಪ್ರಮುಖವಾದಂಥ ಅಂಶ ಇಲ್ದೆ. ಇದಕ್ಕೆ ಸಂಬಂಧಪಟ್ಟಂಥೆ ಒಂದೇ ಒಂಉ ದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾಯಕನಶೆಟ್ಟಿ ಪಾಳ್ಯದಲ್ಲಿಯನ್ನು ಕೂಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾಯಕನಶೆಟ್ಟಿ ಪಾಳ್ಯದಲ್ಲಿ ಸರ್ವೆ ನಂಬರ್ 32ರಲ್ಲಿ ಕಳೆದ 15 ವರ್ಷಗಳಿಂದ ಸದರಿ ನಿವೇಶನದಲ್ಲಿ ವಾಸವಾಗಿದ್ದಾರೆ. ನಗರ ಪಾಲಿಕೆಯ ಮೇಯರ್‌ರವರು ಅಲ್ಲಿಗೆ ಹೋಗಿ, ವಿಶೇಷವಾದಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅಲ್ಲಿನ ನಿವೇಶನದಾರರಿಗೆ ಖಾತಾ ಸರ್ಟಿಫಿಕೇಟ್‌ನ್ನು ಕೊಟ್ಟು, ಬೆಟರ್‌ಮೆಂಟ್ ಚಾರ್ಜ್ ತ್ತು ಪ್ರಾಪರ್ಟಿ ಟ್ಯಾಕ್ಸ್‌ನ್ನು ಹಾಗೂ ಕುಡಿಯುವ ನೀರಿನ ಸರಬರಾಜು ಮತತು ಒಳಚರಂಡಿ ವ್ಯವಸ್ಥೆಯನ್ನು ಹಾಗೂ ಬಿಲ್ಡಿಂಗ್ ಪ್ಲಾನನ್ನು ಬಿಸಿಸಿ ಯವರು ಅಪ್ರೂವ್ ಮಾಡಿದ್ದಾರೆ ಮತ್ತೆ ಕೆ ಇ ಬಿಯವರು ಬೀದಿ ದೀಪಗಳನ್ನು ಸಹ ಅಳವಡಿಸಿದ್ದಾರೆ. ಮತ್ತು ಇಲ್ಲಿ ಇರತಕ್ಕಂಥ ರಸ್ತೆಗಳನ್ನು ಅಗಲೀಕರಣ ಮಾಡಿದ್ದರು, ಸಾಮಾನ್ಯವಾಗಿ ನಾಗರೀಕ ಸೌಲಭ್ಯಗಳೆಲ್ಲವನ್ನು ಇಲ್ಲಿನ ನಾಗರೀಕರಿಗೆ ಒದಗಿಸಿಕೊಟ್ಟಿದ್ದಾರೆ. ಇದು ಲೀಗಲ್ ಅಥವಾ ಇಲ್ಲೀಗಲ್ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ 15 ವರ್ಷಗಳ ಹಿಂದಿನ ಕಡತವನ್ನು ತೆಗೆದರೆ ಇದು ಹೇಗೆ ಬಂತೆಂಬುದು ತಿಳಿಯುತ್ತದೆ. ಇದರ ಬಗ್ಗೆ ಈಗ ನನ್ನ ಹತ್ತಿರ ಯಾವುದೇ ಮಾಹಿತಿ ಇಲ್ಲ. ಒಂದು ವೇಳೆ ಇಲ್ಲೀಗಲ್ ಆಗಿ ಒತ್ತುವರಿ ಮಾಡಿ ಕೊಂಡಿದ್ದಂಥ ಸಂದರ್ಭ ಇದ್ದರೆ, ಅವುಗಳನ್ನು ತೆಗೆಯಬೇಕಾಗುತ್ತದೆ. ಇವುಗಳನ್ನು ತೆಗೆಯುವಂಥ ಸಂದರ್ಭದಲ್ಲಿಯೂ ಕೂಡ ಮಾನವೀಯತೆ ಇರಬೇಕಾಗುತ್ತದೆ. 15 ವರ್ಷಗಳಿಂದ ವಾಸ ಮಾಡಿಕೊಂಡು ಬಂದಿರತಕ್ಕಂಥ ಮನೆಯನ್ನು ದಿಢೀರನೆ ಒಡೆದು ಹಾಕುವುದು ಎಷ್ಟರಮಟ್ಟಿಗೆ ಸೂಕ್ತ

ಎನ್ನತಕ್ಕಂಥದ್ದನ್ನು ತಾವೇ ಹೇಳಬೇಕು. ಸನ್ಮಾನ್ಯ ಸೋಮಣ್ಣನವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಇಲ್ಲೀಗಲ್ ಆಗಿ ಅನ್ ಆಥರೈಜ್ ಆಗಿ ನಿರ್ಮಾಣವಾಗಿತಕ್ಕಂಥ ಮನೆಗಳನ್ನು ಒಡೆದು ಹಾಕುತ್ತೇವೆಂದು ಬಿ.ಡಿ.ಎ.ರವರ ಹೇಳಿದರು ಎಂಬ ಮಾತನ್ನು ಹೇಳಿದರು . ಇವರ ಮಾತನ್ನು ನಾನು ಸಹ ಒಟ್ಟಪುತ್ತೇನೆ. ಇವತ್ತಿನದಿವಸ ಸರ್ಕಾರದ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಅತಿ ಕ್ರಮೇಣ ಮಾಡಿಕೊಂಡಿರುವುದನ್ನು ಬೆಂಗಳೂರಿನ ಸುತ್ತಮುತ್ತಲಿನ ರಸ್ತೆಯಲ್ಲಿ ಹೋಗುತ್ತದ್ದರೆ ಕಾಣುತ್ತದೆ. ಇವತ್ತು ಹೆಬ್ಬಾಳ್‌ನಲ್ಲಿ ಎನ್.ಹೆಚ್.4ಕ್ಕೆ ಹೋಗುವುದಕ್ಕೆ ಒಂದು ರಿಂಗ್ ರೋಡ್‌ನ್ನು ಮಾಡಿದ್ದಾರೆ. ರಿಂಗ್ ರಸ್ತೆಯಲ್ಲಿ ಹೋಗುತ್ತಿದ್ದಾಗ ರಸ್ತೆಯ ಪಕ್ಕದಲ್ಲಿ ಬಾಣಸವಾಗಿ ಕೆರೆ ಬರುತ್ತದೆ. ಆಮನ್ಯ ಮುಖ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ದಯವಿಟ್ಟು ಬಂದು ರಸ್ತೆಯನ್ನು ನೋಡಬೆಕೆಂದು ವಿನಂತಿ ಮಾಡಿಕೊಳ್ಳುತ್ತೆಈನೆ. ಏಕೆಂದರೆ, ಈ ರಸ್ತೆಯನ್ನು ಯಾವ ರೀತಿ ಮಾಡಿದ್ದಾರೆ ಎಂಬುದು ತಮಗೆ ಗೊತ್ತಾಗುತ್ತದೆ. ಇದಂತೂ ಖಂಡಿತ ರಿಂಗ್ ರಸ್ತೆ ಅಲ್ಲ, ಇದೊಂದು ಡೆತ್ ಟ್ರಯಾಕ್ ರಸ್ತೆಯಾಗಿದೆ. ಪ್ರಿನ್ಸಿಪಲ್ ಪ್ರಾಕರ ಈ ರಸ್ತೆಯನು ಕಿಂಚಿತ್ತು ನಿರ್ಮಾಣ ಮಾಡಿಲ್ಲ. ನಾನು ಇಲ್ಲಿಯೆ ಬಾಡಿಗೆ ಮಾನೆಯಲ್ಲಿ ವಾಸ ಮಾಡುತ್ತಿದ್ದು, ಈ ರಸ್ತೆಯಲ್ಲಿ ಪ್ರತಿ ದಿವಸ ಒಂದಲ್ಲೊಂದು ಅಪಘಾತವಾಗುತತಿದೆ. ಈ ರಸ್ತೆಯುತಿರುವುಗಳನ್ನು ಇಂಜಿನಿಯರ್‌ಗಳು ಯಾವ ರೀತಿ ನಕ್ಷೆ ಮಾಡಿ ಮಾಡಿದ್ದಾರೆ ಎಂಬುದು ನನಗಂತೂ ತಿಳಿದಿಲ್ಲ. ಆದ್ದರಿಂದ, ಮಾನ್ಯ ಮೂಕ್ಯಮಂತ್ರಿಗಳು ಈ ರಸ್ತೆಯಲ್ಲಿ ಬಂದು ನೋಡಬೇಕು. ನಿಮ್ಮ ಸರ್ಕಾರ ಇದ್ದಾಗ ಈ ರಸ್ತೆಯನ್ನು ಮಾಡಿರುವುದೆಂದು ತಾವು ಹೇಳಬಹುದು. ನಮ್ಮ ಸರ್ಕಾರ ಇದ್ದಾಗಲೇ ಇದನ್ನು ಮಾಡಲಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಸರ್ಕಾರ, ಈ ಸರ್ಕಾರ ಎನ್ನುವುದಕ್ಕಿಂತ ಯಾವರೀತಿಯಲ್ಲಿ ಸಾರ್ವಜನಿಕ ಕೆಲಸ ನಡೆಯುತ್ತಿದೆ ಎಂಬುದು ಮುಖ್ಯವಾಗಿದೆ. ಆದ್ದರಿಂದ, ತಾವು ದಯವಿಟ್ಟು ಇದನ್ನು ಗಮನಿಸಬೇಕು. ಬಾಣಸವಾಡಿ ಕೆರೆಯಲ್ಲಿ ನೀರು ನಿಂತಿದ್ದರೂ ಸಹ ಅರ್ಧ ಕೆರೆಯಷ್ಟು ಜಾಗಕ್ಕೆ ಆರ್‌ಸಿಸಿ ಕಂಬಗಳನ್ನು ನೆಟ್ಟಿ ಬೇಲಿಯನ್ನು ಹಾಕಿಕೊಂಡಿದ್ದಾರೆ. ಇದು ಎನ್‌ಕ್ರೋಚ್‌ಮೆಂಟ್ ಅಲ್ಲವೇ ಎಂಬ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ. ಇದನ್ನು ತಾವು ಬಂದು ನೋಡಬಹುದು. ಇದೇ ರೀತಿ ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕಂಥ ಅನೇಕ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದದಾರೆ. ಇವನ್ನೆಲ್ಲಾ ನೋಡಿಕೊಂಡು ಇವರು ಯಾವ ರೀತಿ ಇದ್ದಾರೆ ಎನ್ನತಕ್ಕಂಥ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ. ಇದನ್ನು ತಾವು ಬಂದು ನೋಡಬಹುದು. ಇದೇ ರೀತಿ ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕಂಥ ಅನೇಕ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ನೋಡಿಕೊಂಡು ಇವರು ಯಾವ ರೀತಿ ಇದ್ದಾರೆ ಎನ್ನತಖ್ಖಂಥ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವತ್ತಿನದಿವಸ ಬೆಂಗಳೂರಿನಲ್ಲಿ ಯಾವುದಾದರೂ ಜಾಗವನ್ನು ಅತಿಕ್ರಮಣ ಮಾಡಿ ಕಾನೂನಿನ ವಿರುದ್ಧ ಅವರೇನಾದರೂ ಕೂಡ ಒತ್ತುವರಿ ಮಾಡಿಕೊಂಡಿದ್ದರೆ ಅಂತಹವರಿಗೆ ರಕ್ಷಣೆ ಕೊಡಿ ಎಂಬುದು ಇಲ್ಲಿರತಕ್ಕಂಥ ಯಾವ ಸದಸ್ಯರ ವಾದವಲ್ಲ. ಇವರ ಮೆಲೆ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಕೆಲವು ಕಡೆ ಮಾತ್ರ ಈ ಕಾನೂನು ಜಾರಿಯಾಗುವುದಿಲ್ಲವೆಂದರೆ ಇದು ಯಾವ ನ್ಯಾಯ? ಇವತ್ತು ಮತ್ತು ಮಹಾತ್ಮಾಗಂಧಿ ರಸ್ತೆಯಲ್ಲಿ ಹೋಗೆ ನೋಡಿ ಅಲ್ಲಿ ಎಷು ಕಡೆ ವೈಲೇಷನ್ ಆಗಿದೆ? ಎಂ.ಜಿ. ರಸ್ತೆಯಲ್ಲಿ ನೋಡಿ, ಏನೇನು ಇವತ್ತು ಅಲ್ಲಿ ನಡೆಯುತ್ತಿದೆ? ಅಲ್ಲಿ ಅದನ್ನು ನೀವು ಏಕೆ ನಿಲ್ಲಿಸುವುದಿಲ್ಲ? ನಿಮ್ಮ ಡಿಮಾಲೇಶನ್ ಸ್ವಾಡ್ ಏನಾಯಿತು? ಅಲ್ಲಿ 10- 15 ಅಂತಸ್ತಿನ ಕಟ್ಟಡಗಳು

ಹೇಗೆ ಬಂದವು? ನಾವು ಅದನ್ನು ಪುನಃ ಪುನಃ ಕೇಳಿದರೆ, ನಿಮ್ಮ ಸರ್ಕಾರ ಇರುವಾಗ ಆಗಿದೆ ಎನ್ನುತ್ತೀರಿ, ಯಾವುದೇ ಸರ್ಕಾರ ಇದ್ದಾಗ ಆಗಿರಬಹುದು. ಯಾವುದೇ ಸರ್ಕಾರ ಇರಲಿ ಆ ವಿಚಾರ ಬೇರೆ. ಇಲ್ಲಿ ಇದು ಮುಖ್ಯವಾಗಿರುವಂಥದ್ದು. ಹೆಚ್.ಎ.ಎಲ್ ಕಡೆ ನೋಡಿ ಡೈಮಂಡ್ ಡಿಸ್ಟ್ರಿಕ್ಟ್ ಎಂದು ಇದೆ, ಅಲ್ಲಿಗೆ ನಿಮ್ಮ ಅಧಿಕಾರಿಗಳನ್ನು ಹಾಗೂ ಇಂಜನಿಯರುಗಳನ್ನು ಕರೆದು ಕೊಂಡು ನಡೆಯಿರಿ, ತಾವು ಕುಡ ಅಲ್ಲಿಗೆ ಹೋಗಿ ಬಂದರೆ ತಮಗೆ ಗೊತ್ತಾಗುತ್ತದೆ. ಕಾನೂನು ಏನು ಹೇಳುತ್ತದೆ? ಅಲ್ಲಿ ಯಾವ ರೀತಿಯಾದ ಕಟ್ಟಡವನ್ನು ಕಟ್ಟಬಾರದು, ಹಾಗೆ ಅಲ್ಲಿ ಕಟ್ಟಿದ್ದರೆ, ಅಲ್ಲಿ ಹೇಗೆ ಆ ಕಟ್ಟಡಗಳ ನಿರ್ಮಾಣವಾಯಿತು? ಇದಕ್ಕೆ ಕಾರಣ ಏನು? ಇದನ್ನು ನಾನು ಇವತ್ತು ತಮ್ಮ ಮ ಗಮನಕ್ಕೆ ತರಬೇಕಾಗಿರತಕ್ಕಂಥದ್ದು. ಪಾರ್ಕಿಗೆ ಜಾಗವನ್ನು ಬಿಟ್ಟಿರುತ್ತಾರೆ. ಆದರೆ ಇವತ್ತು ನೂರಕ್ಕೆ ತೊಂಬತೊಂಭತ್ತರಷ್ಟು ಪಾರ್ಕಿಗೆ ಜಾಗವಿಲ್ಲ. ಇವತ್ತು ಆ ಜಾಗ್ವೆಲ್ಲ ಹೋಟೆಲ್ ಹಾಗೂ ಅಂಗಡಿಯ ಜಾಗವಾಗಿದೆ. ಇದನ್ನು ತಾವು ಏಕೆ ಡೆಮಾಲಿಶನ್ ಮಾಡಲಿಲ್ಲ? ರೆಸಿಡೆನ್ಸಿಯಲ್ ರಸ್ತೆಯಲ್ಲಿ ನೋಡಿ, ರಾಜಭವನದಲ್ಲಿ ನಿಂತು ನಾವು ಜೋರಾಗಿ ಕೂಗಿದರೆ ವಿಧಾನಸೌಧಕ್ಕೆ ಕೇಳಿಸುತ್ತದೆ. 'ಕ್ಯಾಪಿಟಲ್ ಹೋಟೆಲ್' ಎಂದು ಹೆಸರು ಇಟ್ಟಿದ್ದಾರೆ, ಇದರ ಬಗ್ಗೆ ನಾನು ವಿರೋಧ ಪಕ್ಷದಲ್ಲಿದ್ದಾಗ ಪ್ರಸ್ತಾಪ ಮಾಡಿದ್ದೆ, ಇದರ ಬಗ್ಗೆ ಏನೂ ಕ್ರಮ ಜರುಗಲಿಲ್ಲ. ತಾವು ಹಾಗೂ ತಮ್ಮ ಮಂತ್ರಿಮಂಡಲದ ಎಲ್ಲ ಸಚಿವರು ಹೇಳಿರುತ್ತೀರಿ ಇದರಲ್ಲಿ ಯಾರೇ ಆಗಲಿ, ಎಂತಹವರೇ ಆಗಲಿ ಎಂತಹ ಪ್ರತಿಷ್ಠಿತರಿದ್ದರು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿರುತ್ತೀರಿ. ತಾವು ಪ್ರಾರಂಭಮಾಡಬೇಕಾಗಿದ್ದು ಇಂತಹ ಕಡೆ. ಕುಣಿಗಲ್, ಮಾಗಡಿ, ಕನಕಪುರ, ಕೋಲಾರ ಕಡೆಯಿಂದ ಬಂದಂಥ ನಿರ್ಗತಿಕರ ಮೇಲೆ ಕ್ರಮ ತೆಗೆದುಕೊಂಡರೆ, ಇವರ ಕೂಡ ಕಾನೂನಿನ ವಿರುದ್ಧ ಕೆಲಸವನ್ನು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ದೊಡ್ಡ ದೊಡ್ಡ ಕುಳಗಳು ಏನಿದ್ದಾರೆ ಮೊದಲು ಅವರಿಂದ ನೀವು ಪ್ರಾರಂಭ ಮಾಡಿದರೆ ಜನ ಕೂಡ ಮೆಚ್ಚುತ್ತಾರೆ. ಇಂಥದ್ದಕ್ಕೆ ಯಾವ ಪ್ರತಿಭಟನೆ ಬರುವುದಿಲ್ಲ. ದೊಡ್ಡ ದೊಡ್ಡ ಜನರಿಗೆ ಬಲಿಹಾಕಿದ್ದಾರೆ, ಇನ್ನು ನಾವು ಯಾವ ಲೆಕ್ಕ ಎಂದು ಜನ ತಿಳಿದುಕೊಳ್ಳುತ್ತಾರೆ. ಈ ರೀತಿಯಾಗಿ ಮೊದಲು ಕ್ರಮ ಕೈಗೊಳ್ಳಿ, ಪ್ರಭಾವ ಇರತಕ್ಕಂಥ ಲಾರಿಗಟ್ಟಲೆ ಹಣವನ್ನು ಹೊಂದಿರತಕ್ಕಂಥವರಿದ್ದಾರಲ್ಲ ಅಲ್ಲಿಂದ ಪ್ರಾರಂಭ ಮಾಡಬೇಕು. ಆನಂತರ ಈ ಕ್ರಮವನ್ನು ಬಡವರ ಮೇಲೆ ಕೈಗೊಂಡರೆ ಜನ ಕೂಡ ಮೆಚ್ಚುತ್ತಾರೆ ಎಂದು ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾನೂನಿಗೆ ವಿರುದ್ಧವಾಗಿ ಯಾರೇ ಕಟ್ಟಡವನ್ನು ಕಟ್ಟಿದ್ದರೂ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಇವರಲ್ಲಿ ಲ್ಯಾಂಡ್ ಗ್ರಾಬರ್ಸ್ ಇದ್ದಾರೆ, ನಾನು ಮಂತ್ರಿಯಾಗಿದ್ದಾಗ ನನ್ನ ಗಮನಕ್ಕೆ ಬಂದಂಥ ವಿಚಾರ ಹೇಳುತ್ತೇನೆ, ಇವರು ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಾರೆಂದರೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಒಂದು ದೊಡ್ಡ ಕ್ಯಾಂಪಸ್ ಇದೆ, ಶನಿವಾರ, ರವಿವಾರ ರಜೆ ಇತ್ತು ಆಗ ರಾತ್ರೋರಾತ್ರಿ, ನೂರು ಕಟ್ಟಡಗಳು ಬಂದವು. ನಾನು ಸಹ ಅಂದು ಊರಲ್ಲಿ ಇರಲಿಲ್ಲ. ಲ್ಯಾಂಡ್ ಗ್ರಾಬರ್ಸ್ ಹೊರರಾಜ್ಯಗಳಿಂದ ಬಂದಿರುತ್ತಾರೆ. ಇವರು ಏನು ಮಾಡುತ್ತಾರೆಂದರೆ, ಒಂದು ಸಣ್ಣ ಮನೆ ಅಥವಾ ಗುಡಿಸಲನ್ನು ಹಾಕಿಸುತ್ತಾರೆ. ಅದಕ್ಕೆ ಒಂದು ಫೋಟೋ ತೆಗೆಸುವುದು, ಇದರ ಬಗ್ಗೆ ಖಾಲಾ ಕಂದಾಯ ಫೋರ್ಜರಿಯಾಗಿ ಮಾಡಿಸುವುದು. ಆ ದಾಖಲೆಗಳನ್ನು ತೆಗೆದುಕೊಂಡು ಹೋಗಿ ಕೋರ್ಟಿನಲ್ಲಿ ಸ್ಟೇ ತೆಗೆದುಕೊಳ್ಳುತ್ತಾರೆ. ಇಂತಹ ಕೆಲವನ್ನು ಮಾಡುವಂಥದ್ದು ನಡೆಯುತ್ತದೆ. ನಾನು ಇವತ್ತು

ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕ ವೃಂದವನ್ನು ಅಭಿನಂದಿಸುತ್ತೇನೆ. ಅವರು ಹಿಂದೆ ನೇರವಾಗಿ ಕಟ್ಟಡವನ್ನು ಕಟ್ಟಿರತಕ್ಕಂಥ ಸ್ಥಳಕ್ಕೆ ಹೋಗಿ ಧ್ವಂಸ ಮಾಡಿದ್ದರು. ಯಾವ ಸ್ಕ್ವಾಡ್ ಕೂಡ ಹೋಗಲಿಲ್ಲ ಅವರೇ ಅದನ್ನು ಧ್ವಂಸ ಮಾಡಿದರು. ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಇವತ್ತಿನ ದಿವಸ ಪರರ ಪಾಲಾಗುತ್ತದೆ. ಇಂಥದ್ದನ್ನು ಧ್ವಂಸ ಮಾಡಬೇಕಾಗಿರತಕ್ಕಂಥದ್ದು ಹೊರರಾಜ್ಯಗಳಿಂದ ಗಾಹೂ ಈ ರಾಜ್ಯದಲ್ಲಿರತಕ್ಕಂಥವರು ಯಾರು ಭೂಮಿಯನ್ನು ಕಬಳಿಸುವಂಥ ಲ್ಯಾಂಡ್ ಗ್ರ್ಯಾಬರ್ಸ್ ಇದದ್ದಿ. ಇಂತಹ ತಿಮಿಂಗಿಲಗಳನ್ನು ಮೊದಲು ಮುಗಿಸಬೇಕು, ಇದನ್ನು ಸದೆಬಡಿಯುತಂತಹ ಕೆಲಸ ತಮ್ಮ ಕಾಲದಲ್ಲಿ ಆದರೆ ತಮ್ಮ ಹೆಸರು ಕೂಡ ಶಾಶ್ವತವಾಗಿ ಇರುತ್ತದೆ. ದಯವಿಟ್ಟು ಆ ಕೆಲಸವನ್ನು ತಾವು ಮಾಡಬೇಕು. ನಿರ್ದಾಕ್ಷಿಣ್ಯವಾಗಿ, ಯಾರೇ ಎಷ್ಟೇ ಪ್ರಭಾವವಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಕೆಲವು ಕಡೆ ತಾವು ಹೇಳಿದ್ದೀರಿ. ತಾವು ಆ ಮಾತನ್ನು ಒತ್ತಿ ಒತ್ತಿ ಹೇಳಿದ್ದಿರಿ, ಆ ಮಾತನ್ನು ತಾವು ಕೃತಿಗೆ ಇಳಿಸಬೇಕು ಎಂದು ನಾನು ತಮ್ಮಲ್ಲಿ ಮನವಿಯನ್ನು ಮಾಡುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕೊನೆಯಲ್ಲಿ ಮಾತನಾಡಿದಂಥ ಮಾನ್ಯ ಸದಸ್ಯರಾದ ಶ್ರೀ ಸಿ.ಬೈರೇಗೌಡರಿಗೆ ನನ್ನ ವಿಶೇಷವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಒಟ್ಟಾರೆ ಚರ್ಚೆಗೆ ಒಂದು ಪರ್ಸ್‌ಪೆಕ್ಟೀವನ್ನು ಅವರು ತಂದು ಕೊಟ್ಟಿದ್ದಾರೆ. ಆ ಪರ್ಸ್‌ಪಟಕ್ಟೀವ್ ಏನು ಎಂದು ಹೇಳಿದರೆ, ಲ್ಯಾಂಡ್‌ಮಾಫೀಯಾ ಬೆಂಗಳೂರು ಸಿಟಿಗೆ ಹೊರರಾಜ್ಯದಿಂದ ಬಂದಿದ್ದಾರೋ, ನಮ್ಮಲ್ಲೇ ಇರತಕ್ಕಂಥವರು ತಿಮಿಂಗಲಗಳಾಗಿ ಪರಿವರ್ತನೆ ಹೊಂದಿದ್ದಾರೋ ನನಗೆ ಗೊತ್ತಿಲ್ಲ. ಆದರೆ ನಾವು ಅವರ ಮೇಲೆ ಸಮರವನ್ನು ಸಾರಿದ್ದೇವೆ. ಅದಕ್ಕೆ ಸದನದ ಎಲ್ಲಾ ಭಾಗದಿಂದಲೂ ಬಂದಿರತಕ್ಕಂಥ ಸದಸ್ಯರ ಸಹಕಾರಕ್ಕೆ ನಾನು ಋಣಿಯಾಗಿದ್ದೇನೆ. ಮಾನ್ಯ ಸಿಂಧ್ಯಾರವರು ತಮ್ಮ ಅಪಾರವಾದ ಅನುಭವದ ಹಿನ್ನೆಲೆಯಲ್ಲಿ ಈ ಚರ್ಚೆಯನ್ನು ಪ್ರಾರಂಭ ಮಾಡಿದದ್ರಿ. ಅವರು ಮಂಡಿಸಿದಂಥ ಎರಡು ತತ್ವಗಳಿಗೆ ನನ್ನ ಸಹಮತವಿದೆ .ಎಲ್ಲೆಲ್ಲಿ ಸಾರ್ವಜನಿಕ ಸ್ವತ್ತುಗಳನ್ನು ಪಟ್ಟಭದ್ರಹಿತಾಸಕ್ತಗಳು ತಮ್ಮದಾಗಿ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಅಂತಹ ಪ್ರಯತ್ನಕ್ಕೆ ನಾವು ಯಾರೂ ಬೆಂಬಲವನ್ನು ಕೊಡುವುದಿಲ್ಲ. ಅಂತಹ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲಿಕ್ಕೆ ಸರ್ಕಾರ ತೆಗೆದುಕೊಳ್ಳುವಂಥ ಎಲ್ಲಾ ಕಾರ್ಯಕ್ರಮಗಳಿಗೂ ಕೂಡ ನಾವು ಬೆಂಬಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ಹೆಲಿದ್ದೀರಿ ವಿಶೇಷವಾಗಿ ಎಲ್ಲಿ ಪಾರ್ಕ್‌ಗಳಿಗೋಸ್ಕರ, ಸಿಕ್ ಆಮಿನಿಟೀಸ್ ಗೋಸ್ಕರ ರಸ್ತೆಗೋಸ್ಕರ, ಎಲ್ಲೆಲ್ಲಿ ರಿಸರ್ವೇಶನ್‌ನ್ನು ಮಾಡಿದ್ದೇವೆ ಅಂಥವುಗಳನ್ನು ಅತಿಕ್ರಮ ಪ್ರವೇಶ ಎಂದು ಮಾಡಿ, ಆ ಸಾರ್ವಜನಿಕ ಸ್ವತ್ತಿನ ಒಂಉ ಕಾಸನ್ನು ಸರ್ಕಾರಕ್ಕೆ ಕೊಡದೆ, ಸಮಾಜಕ್ಕೆ ಕೊಡದೆ, ತಮ್ಮದಾಗಿ ಮಾಡಿಕೊಳ್ಳುವ ದಿಕ್ಕಿನಲ್ಲಿ ಬಹಳಷ್ಟು ಶಕ್ತಗಳು ಸಫಲರಾಗಿದ್ದಾರೆ. ಇನ್ನು ಕೆಲವರು ಪ್ರಯತ್ನಗಳನ್ನು ನಸೆಸುತ್ತಿದ್ದಾರೆ. ಆದ್ದರಿಂದ ಅಂಥವರ ಬಗ್ಗೆ ಮಾನರಯ ಸಿಂಧ್ಯಾರವರು ಮಾನ್ಯ ಸುರೇಶ್ ಕುಮಾರ್‌ರವರು, ಮಾನ್ಯ ಅಶೋಕ್‌ರವರು, ಮತ್ತು ಮಾನ್ಯ ಸೋಮಣ್ಣನವರು ಎಲ್ಲರೂ ಕೂಡ ಒಟ್ಟಾರೆಯಾಗಿ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಆ ಬಗ್ಗೆ ಪ್ರಸ್ತಾಪ ಮಾಡುವಂಥದ್ದು ಅಪ್ರಸ್ತುತ. ಕಳೆದ ಹತ್ತಾರು ವರ್ಷಗಳಲ್ಲಿ ಇಂತಹ ಅಹಿತಕರ, ಅನಾರೋಗ್ಯಕರ ಬೆಳವಣಿಗೆ ಬೆಂಗಳೂರು ಪಟ್ಟಣವನ್ನು ಡಿಸ್ಫಿಗರ್ ಮಾಡಿದೆ ಎನ್ನತಕ್ಕಂಥದ್ದನ್ನು ಮಾನ್ಯ ಬೈರೇಗೌಡರು ಹೇಳಿದ್ದಾರೆ. ನಾವು ಕಂಡ ಬೆಂಗಳೂರು ಭೂಮಿ

ಆಕಾಶದಷ್ಟು ವ್ಯತ್ಯಾಸವಿದೆ. ವಿದ್ಯಾರ್ಥಿದೆಸೆಯಲ್ಲಿ ಇದ್ದಾಗ, ನಾವು ನೋಡುತ್ತಿರುವಂಥ ಬೆಂಗಳೂರಿಗೂ ಇವತ್ತಿಗೆ ನೋಡಿದರೆ, ಬೆಂಗಳೂರು ಹಾಳು ಕೊಂಪೆಯಾಗಿದೆ, ಆ ರೀತಿಯಾಗುವುದಕ್ಕೆ ನಾವು ಬಿಡ ಬಾರದು. ಒಟ್ಟು ನಮ್ಮೆಲ್ಲರ ಮೂಲಭೂತ ಅನಿಸಿಕೆ ಏನು ಇದೆ, ಆ ಅನಿಸಿಕೆಯ ಬಗ್ಗೆ ಸದನದಲಲಿ ಒಮ್ಮತ ಬಂದಿರತಕ್ಕಂಥದ್ದು ಏನುದು ಗಮನಾಹರವಾದಂಥ ಬೆಳವಣಿಗೆ ಎಂದು ನಾನು ಭಾವನೆ ಮಾಡುತ್ತೇನೆ. ನಮ್ಮ ದೃಷ್ಟಿ, ನಮ್ಮ ಗಮನವೆಲ್ಲವೂ ಒಂದೆ, ಯಾರೂ ಕೂಡ ಸರ್ಕಾರವನ್ನು ವಂಚನೆ ಮಾಡಿ ಸಾರ್ವಜನಿಕರಿಗೆ ಸೇರಿದಂಥ ಭೂಮಿಯನ್ನು ತಮ್ಮದಾಗಿ ಮಾಡಿಕೊಳ್ಳುವಂಥ ಪ್ರವೃತ್ತಿಗೆ ಕಡಿವಾಣವನ್ನು ಒಂದು ಘಟ್ಟದಲ್ಲಿ ಹಾಕದೇ ಹೋದರೆ, ನಾವು ಬೆಂಗಳೂರನ್ನು ಉಳಿಸುವುದು ಹೇಗೆ? ಬೆಳೆಸುವುದು ಹೇಗೆ? ಈ ಪ್ರಶ್ನೆ ಬಹಳ ಕಠಿಣವಾದ ಪ್ರಶ್ನೆಯಾಗಿದೆ. ಮಾನ್ಯ ಸೋಮಣ್ಣನವರು ಇದು ಒಂದು ಕ್ಯಾನ್ಸರ್ ಗ್ರೋತ್ ಎಂದು ಹೇಳಿದರು.

1. 10 ಪಿ. ಎಂ.

1976ನೇ ಇಸವಿಯಲ್ಲಿ ಬಿಡಿಎ ಬಂತು. ಅದಕ್ಕೆ ಮೊದಲು ಸಿ. ಐ. ಟಿ. ಬಿ. ಇತ್ತು. ಒಂದು ಕಾಲದಲ್ಲಿ ಸಿಐಟಿಬಿನವರು ಕರೆದು ಸೈಟು ಗಳನ್ನು ಹಂಚುತ್ತಿದ್ದರು. ಅನಂತರ ಈ ಬಗ್ಗೆ ಲಕ್ಷಾಂತರ ಅರ್ಜಿಗಳು ಬರುವುದಕ್ಕೆ ಪ್ರಾರಂಭವಾಯಿತು. ನಾನು ಮೊದಲನೆಯ ರಾಜ್ಯಪಾಲರ ಭಾಷಣದ ಸಮಯದಲ್ಲಿ ಒಂದು ವಿಚಾರವನನು ಸ್ಪಷ್ಟಪಡಿಸಿದ್ದೆ. ಈ ಎಲ್ಲಾ ವ್ಯವಹಾರಗಳಿಂದ ಬೆಂಗಳೂರನ್ನು ನಾವು ರಕ್ಷಣೆ ಮಾಡಬೆಕಾಗಿರುವಂತದ್ದು ಅಗತ್ಯವಾಗಿದೆ. ಆದ್ದರಿಂದ ಯಾವುದೆ ದಾಕ್ಷಿಣ್ಯಕ್ಕೂ ಕೂಡ ಸರ್ಕಾರವು ಮಣಿಯುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳಿದೆ. ಆ ಮಾತುಗಳನ್ನು ಹೇಳಿದ ಮೇಲೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ. ಬೆಂಗಳೂರು ಕಾರ್ಪೋರೇಷನ್‌ನವರು, ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಒಂದು ಅಂದಾಜಿನ ಪ್ರಕಾರ ಇದುವರೆಗೂ ಮಾಡಿರತಕ್ಕಂಥಹ Clean- Up operations. According to our estimate. the market value of the properties involved in unauthorised constructions is 700 crores ಇದುವರೆಗೂ ಕಳೆದ 6 ತಿಂಗಳಲ್ಲಿ ಆಗಿದೆ. ಬಿಡಿಎ ನವರು ಇದನ್ನು ಮುಂದುವರಿಸಿಕೊಂಡು ಹೋದರೆ 2000 ಕೋಟಿ ರೂಪಾಯಿಗಳಷ್ಟು ಮೊತ್ತದ ಅನ್ ಅಥರೈಸ್ಡ್ ಪ್ರಾಪರ್ಟಿಯನ್ನು ನಾವು ತೆಗೆದುಕೊಳ್ಳಬಹುದು. ಎನ್ನತಕ್ಕಂಥಹ ಒಂದು ಪ್ರೊಜೆಕ್ಟನನ್ನು ಅವರು ಕೊಟ್ಟಿದ್ದಾರೆ. ಈಗ ಸದನದ ಮುಂದಿರತಕ್ಕಂಥಹ ಪ್ರಶ್ನೆ, ಈ ಅಹಿತಕರವಾದಂತಹ ಬೆಳವಣಿಗೆಗೆ ನಾವು ಮುಕ್ತವಾದಂತಹ ಅವಕಾಶವನ್ನು ಕೊಡಬೇಕೇ ಅಥವಾ ಅದರ ಮೇಲೆ ಪ್ರಬಲವಾದಂತಹ ನಿಯಂತ್ರಣವನ್ನು ಹಾಕುವುದರ ಮೂಲಕ ಬಾಕಿ ಶಕ್ತಿಗಳು ಇನ್ನು ಏನು ಹವಣಿಸುತ್ತಿವೆ ಅವರಿಗೆ ಎಚ್ಚರಿಕೆಯನ್ನು ಕೊಡತಕ್ಕಂಥದ್ದನ್ನು ಸಾಧ್ಯವೇ? ಅದು ಆಗಬೆಕಾಗಿರುವಂತಹ ವಿಚಾರವೆ? ಎನ್ನತಕ್ಕಂಥದನ್ನು ಕೂಡ ನಾವು ಯೋಚನೆ ಮಾಡಬೆಕಾಗಿದೆ. ಬಸವೇಶ್ವರ ನಗರದಲ್ಲಿ ನಡೆದಂತಹ ಪ್ರಕರಣ, ಉತ್ತರಹಳ್ಳಿಯಲ್ಲಿ ನಡೆದಂತಹ ಪ್ರಕರಣಗಳು ಮಾನ್ಯ ಸುರೇಶ್‌ಕುಮಾರ್‌ರವರು ಹೆಳಿದ ಸರ್ವೆ ನಂ. 39 ಅಗ್ರಹಾರ ದಸರಹಳ್ಳಿ, ಇದರ ಬಗ್ಗೆ ಮಾತನಾಡಿ ಸಲಹೆಗಳನ್ನು ಕೊಟ್ಟಿದ್ದಾರೆ. ಬಿಡಿಎ ಆ್ಯಕ್ಟ್ 1979-80 ಇದಕ್ಕೆ ತಿದ್ದುಪಡಿಗಳನ್ನು ತರಬೇಕಾಗಿರುವಂತದ್ದು ಆವಶ್ಯಕ ಎಂದು ಹೇಳಿದ್ದಾರೆ; ನಾನು ಅದನ್ನು ಪರಿಶಿಲನೆ ಮಾಡುತ್ತೇನೆ. ಬೆಂಗಳೂರು ಡೆಮಾಲಿಷನ್ ಅಥಾರಿಟಿ ಎಂದು ಅವರು

ಹೇಳಿದರು, ಇಲ್ಲಾ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಆಗಿರಬಹುದು, ಅಥವಾ ಬೆಂಗಳೂರು ಡಿನೋಟಿಫಿಕೇಷನ್ ಅಥಾರಿಟಿ ಎಂದು ಕೂಡ ನಾವು ಮಾಡುವುದಕ್ಕೆ ಸಿದ್ಧರಿಲ್ಲ. ಆದ್ದರಿಂದ ಬಿ ಡಿ ಎಗೆ ನಾನಾ ವಿಧವಾದಂತಹ ವ್ಯಾಖ್ಯಾನಗಳನ್ನು ಕಡಬಹುದಾಗಿತ್ತು. ಮಾನ್ಯ ಸುರೇಶ್‌ಕುಮಾರ್‌ರವರು ವ್ಯಾಖ್ಯಾನವನ್ನು ಇಲ್ಲಿ ಕೊಟ್ಟಿದ್ದಾರೆ. ಒಟ್ಟಾರೆ ಇದರಲ್ಲಿ ನಾನು ನನ್ನದೆ ಆದ ವ್ಯಾಖ್ಯಾನವನ್ನು ಮಾಡುವುದಕ್ಕೆ ಇಲ್ಲಿ ಅವಕಾಶವಿದೆ. ಈದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಏನು ಇಲ್ಲ. ನಿಮ್ಮ ಉದ್ದೇಶ ಏನು ಇದೆ, ಸರ್ಕಾರದ ಉದ್ದೇಶವು ಕೂಡ ಅದೇ ಆಗಿದೆ. Human face from a human angle ಇದನ್ನು ನೋಡಿ ಎಂದು ಹೇಳಿದರು. ಕೆಲವೊಂದು ಸಮಯದಲಿ ಶಾಂತಿರಕ್ಷಣೆಯ ಕರ್ತವ್ಯದಲ್ಲಿ ಅಥವಾ ಯಾರು ಈ ಸಮಾಜದ ವಿರುದ್ಧವಾಗಿ ಹೋಗಿದ್ದಾರೆ. ಅವರ ವಿಚಾರದಲ್ಲಿ ವರ್ತನೆ ಮಾಡತಕ್ಕಂತಹ ಕಾಲದಲ್ಲಿ ನಾವು ಮಾನವೀಯತೆಯನ್ನು ಹೆಚದಚು ಮಾಡಿದರೆ ನಾವು ಅಲ್ಲಿ ಯಾವುದನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೆಲವು ದೊಡ್ಡ ದೊಡ್ಡ ಮನೆಗಳನ್ನು ಒಡೆದು ಹಾಕಿದ್ದಾರೆಂದು ಹೇಳಿದ್ದಾರೆ. ಅವರ ಹತ್ತರ ಸಾಕಷ್ಟು ಮಾಹಿತಿಗಳು ಪುರಾವೆಗಳಿದ್ದಿದ್ದರೆ ಅವರು ಹೈಕೋರ್ಟ್‌ಗೆ ಹೋಗುತ್ತಾರೆ. ಅಥಹದರಲ್ಲಿ ತಮ್ಮಮದೇ ಅದಂಥ ಕಾರ್ಪೊರೇಷನ್ ಇನ್ನು ಮುಂತಾದ ಕಡೆಯಿಂದ ಅವರೆಲ್ಲಾ ಪರ್ಮಿಷನ್‌ನ್ನು ತೆಗೆದುಕೊಂಡು ಕಟ್ಟಿದ್ದಾರೂ ಸಹ ಅಂತಹ ಮನೆಗಳನ್ನು ನೆಲಸಮ ಮಾಡಿದ್ದಾರೆ, ಅವರುಗಳು ಕೋರ್ಟಿಗೆ ಹೋಗಬಹುದಾಗಿತ್ತಲ್ಲಾ? ಅವರಿಗೆ ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಂಗೇರಿ ಪುರಸಭೆಯವರು 1997ನೆ ಇಸವಿಯಲ್ಲಿ ಒಂದು ಎಂಡಾರ್ಸ್‌ಮೆಂಟನ್ನು ಕೊಟ್ಟಿದ್ದಾರೆ. ಒಬ್ಬರಿಗೆ 40 ಅಡಿ ಇಂಟು 60 ಅಡಿ ಸೈಟನ್ನು ಕೊಟ್ಟಿದ್ದೇವೆ ಎಂದು ಹೆಳಿ ಕೊನೆಗೆ ಏನು ಸೇರಿಸಿದ್ದವಿಆರೆಂದರೆ, ಈ ಮೇಲಿನ ಹೆಸರಿಗೆ ಖಾತೆ ಮಾಡಿರುತ್ತದೆ. ಈ ಮೇಲ್ಕಂಡ ಖಾತೆಯ ಬದಲಾವಣೆಯಿಂದ ಉಂಟಾಗುವ ಸಿವಿಲ್ ಮತ್ತು ಇತರೆ ವ್ಯವಹಾರಗಳಿಗೆ ಪುರಸಭೆಯವರು ಜವಾಬ್ದಾರರಲ್ಲ. ಎಂಬ ಅಂಶವನ್ನು ತಿಳಿಸಲಾಗಿದೆ. ನಾನು ಬಿ ಡಿ ಎ ನಿಂದ ಸೈಟ್ ಆಲಟ್‌ಮೆಂಟ್ ಲೆಟರನ್ನು ಕೊಡುತ್ತೇನೆ. ಬಿಡಿ ಎನವರು ಕೊಡುವಂತಹ ಸೈಟ್ ಆಲಾಟ್‌ಮೆಂಟ್ ಲೆಟರ್‌ನಲ್ಲಿ ಈ ಶಬ್ದ, ಈ ವಾಕ್ಯ ಇರುವುದಿಲ್ಲ. ಇರತಕ್ಕಂತಹ ಈ ಸೆಟಿಲೈಟ್, ಸಿ ಎಂ ಸಿಗಳು ಏನು ಇವೆ, ಸರ್ಕಾರದ ಕೆಲವು ಕಾಯಿದೆಗಳ್ಳಿರತಕ್ಕಂತಹ ಸಡಿಲತೆಯನ್ನು ಗಮನಿಸಿ ಅಥವಾ ಆಡಳಿತದಲಲ್ರಿತಕ್ಕಂತಹ ನಿತಕ್ತಿಗಳನ್ನು ಗಮನಿಸಿ ಅವರು ತಮಗೆ ತೋಜಿದ ರೀತಿಯಲ್ಲಿ ಮಾಡುತ್ತಿರುವಂತಹ ದೃಷ್ಟಿಯಿಂದಲೆ ಇವತ್ತು ಉತ್ತರಹಳ್ಳಿಯಲ್ಲಿ ವಿಶೇಷವಾದಂತಹ ಸಮಸ್ಯೆಗಳು ಉದ್ಭವವಾಗಿದೆ ಎನ್ನತಕ್ಕಂತಹ ಮಾನ್ಯ ಸದಸ್ಯರಾದಂತಹ ಶ್ರೀ ಅಶೋಕ್‌ರವರು ಅರ್ಥಮಾಡಿಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ ನಾನು ಸೆಕ್ಷನ್ 38(ಸಿ) ಎಂಡೆಡ್ ಆಗಿದೆ ಎಂದರೆ ಯಾರನ್ನು ನಾವು ಆ ಸೆಕ್ಷನ 38(ಸಿ) ಯ ಬಗ್ಗೆ ನಾವು ರೂಲ್ಸ್‌ನ್ನು ಮಾಡಿದರೆ Whether it is stray sites. civic amentities sites, parks, roads, schools or educational instituations. ಇವರ್‍ಯಾರನ್ನು ಕೂಡ ನಾವು ಎತ್ತಂಗಡಿ ಮಾಡುವುದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ಅಂತಹ ಒಂದೆರಡು ಸೆಕ್ಷನ್‌ಗಳು ಆ 38 (ಸಿ)+ ನಲ್ಲಿ ಇದೆ. ಆದ್ದರಿಂದ ಮಾನ್ಯ ಸದಸ್ಯರುಗಳು ಏನು ನಮ್ಮ ಗಮನಕ್ಕೆ ತಂದಿದ್ದಾರೆ, ಅದರ ಹಿನ್ನೆಲೆಯಲ್ಲಿ ನಾವು ಸೆಕ್ಷನ್ 38(ಸಿ) ಆ ವಿಧೇಯಕ ತಿದ್ದುಪಡಿಯನ್ನು ನಾವು ಕಾಂಪ್ರಹೆನ್ಸಿವ್ ಆಗಿ ಅದನ್ನು ರಿವ್ಯೂ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಈ ಸಮಯದಲ್ಲಿ ತಮ್ಮಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದಂತಹ ಶ್ರೀ

ಸುಬ್ಬಾರೆಡ್ಡದಡಿಯವರು ಬಿಡಿಎ ಕಛೇರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದರಲ್ಲಿ ಅವರು ಏನು ಬರೆದಿದ್ದಾರೆಂದರೆ, ನೀವು" protection of public property in SUrvey No.18 situated in Marenahalli. J.P. Nagar, Bangalore: The authorities of the Corporation, the Bangalore Development Authority and the Deputy Commmissioer have shown Utter laxity and complete indifference in trying to protect the parks and open place reserved under comprehensive Development Plan. ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಎಲ್ಲವನ್ನು ಕೂಡ ನಮೂದಿಸಿದ್ದಾರೆ. ಮಾನ್ಯಗಂಗಭೈರಯ್ಯನವರು ನಮ್ಮ ಕಾರ್ಪೊರೇಷನ್‌ನಲಲಿ ಬಿಜೆಪಿಯ ನಾಯಕರು ಅವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು Basaveshwaranagar ward Coopporter Sri Gangabyraiah. who is also the opposition Leader in the Corporation blames the B.D.A. for encroachment of parks and for not handing over civic amenities sites to the city corporation. ಎಂದು ಹೇಳಿದ್ದಾರೆ. ಇದಾದ ನಂತರ ಮಾನ್ಯ ಸುರೇಶ್‌ಕುಮಾರ್‌ರವರು ರಾಜಾಜಿನಗರದ ಕೆಲವು ಭಾಗದ ಇಲ್ಲಿಗಲ್ ಸ್ಟ್ರಕ್ಚರ್ಸ್‌ನ ಡೆಮಾಲಿಷ್‌ನ್ನು ತಡೆದು ಅದನ್ನು ನಿಲ್ಲಿಸಿದ್ದಾರೆ.

SRI.S. SURESH KUMAR : My act was not illegal

SRI .S.M. KRISHNA : What is what the newspapers say. I am only quoting it. Because you also quote the newspapers.

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಇವತ್ತು ನ್ಯೂಸ್‌ಪೇಪರ್‌ನ್ನು ಕೋಟ್ ಮಾಡಲಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ತಾವು ಇವತ್ತು ಮಾಡಲಿಲ್ಲ. ಸರ್ವಸಾಧಾರಣವಾಗಿ ಎಲ್ಲರೂ ನ್ಯೂಸ್ ಪೇಪರ್‌ನ್ನು ಕೋಟ್ ಮಾಡುತ್ತಾರೆ. ಆದ್ದರಿಂದ I also take the liberty of quoting the newspapers. "Illegal structures demolished in city". ಎಂದು ಹೇಳತಕ್ಕಂತಹ ಪುರವಣಿಯಲ್ಲಿ ಮಾನ್ಯ ಸುರೇಶ್‌ಕುಮಾರ್ ಮತ್ತು ಕಾಮಾಕ್ಷಿಪಾಳ್ಯದ ಕಾರ್ಪೋರೇಟರ್ ರಂಗಣ್ಣನವರು ಮಾಡಿದ್ದಾರೆಂದು ಹೇಳಿದ್ದಾರೆ. ಇನ್ನು ಸೆಕ್ಷನ್ 38ರ ಬಗ್ಗೆ ನಾನು ಈ ನಗರದ ಶಾಸನಸಭಾ ಸದಸ್ಯರುಗಳು ಯಾರಿದ್ದಾರೆ ಅವರ ಮಾರ್ಗದರ್ಶನವನ್ನು ನಾನು ಬಯಸುತ್ತೇನೆ. ಈ ಬಗ್ಗೆ ನಾವು ರಿವ್ಯೂ ಸಹ ಮಾಡಬಹುದು, ಅದು ಹೇಗೆ? ನಾವು ಮತ್ತು ನೀವು ಏನು ಉದ್ದೇಶವನ್ನು ಇಟ್ಟುಕೊಂಡು ಸದನದಲ್ಲಿ ಸಮರ್ಥಿಸಿದ್ದೀರಿ, ಆ ಉದ್ದೇಶಗಳ ಸಾಧನೆಗೆ ಅದನ್ನು ಯಾವ ರೀತಿಯಾಗಿ ಪರಿವರ್ತನೆ ಮಾಡಬೇಕು ಎನ್ನುವುದಕ್ಕೆ ಒಟ್ಟಾರೆ ಚಿಂತನೆ ಅಗತ್ಯವಾಗಿದೆ. ಒಂದು ಕಾನ್‌ಸನ್ಸ್‌ನಸ್ ಡೆವಲಪ್ ಮಾಡಬೇಕಾಗಿರುವುದು ಅವಶ್ಯಕ ಎನ್ನತಕ್ಕಂಥಹ ದೃಷ್ಟಿಯಿಂದ ನಾನು ತಮ್ಮಲ್ಲಿ ಹೇಳಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. 10ಸಾವಿರ ಮನೆಗಳನ್ನು ಮೊನ್ನೆ ದಿನ ಒಡೆದು ಇನ್ನು 10 ಸಾವಿರ ಜನರಿಗೆ ನೀವು ಸೈಟ್‌ಗಳನ್ನು ಕೊಡುತ್ತಿದ್ದೀರಾ ಎಂದು ಹೇಳಿದರು. ಇದು ಒಂದು ಯಕ್ಷಪ್ರಶ್ನೆಯಾಗಿದೆ, ಯಾರು ಪರವಾನಗಿ ಇಲ್ಲದೆ ಲೈಸನ್ಸ್ ಇಲ್ಲದೆ ಕಟ್ಟಿದಂತಹ ಮನೆಗಳು ಇವೆ ಅದನ್ನು ನಾವು ಸಕ್ರಮಗೊಳಿಸಿದರೆ ಈ ಬಗ್ಗೆ ಸಹಸ್ರಾರು ಅರ್ಜಿಗಳು ಸಕ್ರಮಗೊಳಿಸುವುದು ನಮ್ಮ ಬಿಡಿಎ ನಲ್ಲಿ ಇದೆ.

ಲಾ ಅ ಬೈಂಡಿಂಗ್ ಸಿಟಿಜನ್ಸ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಮಗೆ ಸೈಟುಗಳನ್ನು ಕೊಡಿ ಎಂದು ಹತ್ತು ಹನ್ನೆರಡು ಸಾರಿ ಬಿ.ಡಿ. ಎ ದವರು ಕರೆದ 'ಲೆಲ್ಲ ಅರ್ಜಿ ಹಾಕಿರತಕ್ಕದ್ದು ನಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಅವರು ಕ್ಲೈಮ್ಸ್‌ನ್ನು ನೋಡತಕಕ್ಕವರು ಯಾರು? ಅವರ ಬಗ್ಗೆ ಮಾನವೀಯತೆಯನ್ನು ತೋರಿಸತಕ್ಕವರು ಯಾರು? ಆ ಹೊಣೆಗಾರಿಕೆ ಆ ಜವಾಬ್ದಾರಿ ಮಾನ್ಯ ಅಶೋಕರವರಿಗೆ ಇದೆ ಎನ್ನತಕ್ಕದ್ದು ಸೀಮಿತವಾದಂತಹ ವಾದ. ಹತ್ತು ಸಾವಿರ ಜನ ಶಕ್ತಿಯಿಂದ ಮಸಲ್ ಪವರ್‌ನಿಂದ ಶಾಮೀಲಾಗಿದ್ದಾರೆ ನಿಜ. ಬಿ.ಡಿ.ಎ. ಅಧಿಕಾರಿಗಳು ಕಾರ್ಪೊರೇಷನ್ ಅಧಿಕಾರಿಗಳು ಶಾಮೀಲಾಗದೇ ಹೋದರೆ ಇಂತಹ ಅಕೃತ್ಯಗಳು ಬೆಂಗಳೂರಿನಲ್ಲಿ ನಡೆಯಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ ಇವತ್ತು ಅದರ ಮೇಲೂ ನಾವು ನಿಯಂತ್ರಣ ಹಾಕಬೇಕೇ ಬೇಡವೇ ಎನ್ನತಕ್ಕದ್ದು ಇದೆ. ಈ ಸರ್ಕಾರದ ಉದ್ದೇಶ ಏನೆಂದು ಹೇಳಿದರೆ, ಅಂತಹ ಅಧಿಕಾರಿಗಳ ಮೇಲೆ ನಿಯಂತ್ರಣ ವನ್ನು ಹಾಕಲೇಬೇಕಾದ ಪರಿಸ್ಥಿತಿ ಬಂದಿದೆ. ಅದನ್ನು ನಾವು ನೀವು ಕೂತು ಚರ್ಚೆಮಾಡಿ, ಅನಂತರ ಒಂದು ತೀರ್ಮಾನಕ್ಕೆ ಬರೋಣ. ಮತ್ತೆ ಎರಡು ಮೂರು ವಿಚಾರಗಳು ಪ್ರಸ್ತಾಪವಾಗಿವೆ. ಇಮ್ಮೀಡಿಯಟ್ ಆಗಿ ನಾವು ಹೇಳುವುದೇನೆಂದರೆ. Encroachments on parks and palygrounds can never be regularised. There is total unanimity on this as this would go against the law of the Supreme court. Encroachments on civic amentities sites can never be regularised as these sites are the properties of the community and reserved fo r the direct benefits of the residents of the locality. Encroachments of commercial sites can also never be regularised as this would amount to condoning what they have done unauthorisedly. Pakka residential houses do merit some consideration. ಮೊಡಾಲಿಟೀಸ್ ಅನ್ನು ನಾವು ಬಹಳ ಕಾನ್ಷಿಯೆಸ್ ಆಗಿ, ಕೇರ್‌ಫುಲ್ ಆಗಿ ಅದನ್ನು ಮಾಡುವುದರ ಮೂಲಕ ಬೆಂಗಳೂರಿನಲ್ಲಿ ಒಂದು ಸ್ಯಾಂಕ್ಟಿಯನ್ನು ರೆಸ್ಟೋರ್ ಮಾಡಲಿಕ್ಕೆ ನಾವು ನೀವು ಪ್ರಯತ್ನ ಮಾಡಬಹುದು ಎನ್ನತಕ್ಕ ಮಾತುಗಳನ್ನು ಹೇಳುತ್ತೇನೆ. ಎರಡು ವಿಚಾರಗಳನ್ನು ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸ್ಪಂದಿಸಬೇಕಾಗಿರತಕ್ಕದ್ದು ನನ್ನ ಕರ್ತವ್ಯ. ಹೋಟೆಲ್ ಕ್ಯಾಪಿಟಲ್‌ಗೆ ಒಂದು ಕಾಂಪ್ರಿಹೆನ್ಸೀವ್ ಷೋಕಾಸ್ ನೋಟೀಸನ್ನು ಕಾರ್ಪೋರೇಷನ್‌ರವರು ಕೊಟ್ಟರು. ಹಿಯರಿಂಗ್ 7-4-2000ರಲ್ಲಿ ನಡೆಯಿತು. Matter is posted for 17-4-2000. for a decision on the merits of the case. According to the corporation Act. anyone can Appeal to the Commissioner of the Corporatioon. Law will take its own course, ಹೋಟಲ್ ಕ್ಯಾಪಿಟಲ್‌ಗೆ ಸಂಬಂಧಪಟ್ಟ ಹಾಗೆ. ಹಾಗೆಯೇ Diamong -District - directions to issue partial occupancy Certificate to Diamond District was given by the previous Government. So, a public interest litigation is before the High Court and the matter is stayed. ಮಾನ್ಯ ಭೈರೇಗೌಡರು ಮಹಾತ್ಮಗಾಂಧಿ ರಸ್ತೆಯಲ್ಲಿ ಬೇಕಾದಷ್ಟು ಎನ್‌ಕ್ರೋಚ್‌ಮೆಂಟ್ ಆಗಿದೆಯೆಂದು ಹೇಳಿದರು ಅದರ

ಬಗ್ಗೆ ಯಾವುದಾದರೂ ಪಟಿಕ್ಯುಲರ್ಸ್ ಇದ್ದರೆ ದಯವಿಟ್ಟು ನನ್ನ ಕಡೆಗೆ ಕಳುಹಿಸಿಕೊಟ್ಟರೆ, ಅದರ ಕಡೆಗೂ ನಮ್ಮ ದೃಷ್ಟಿಯನ್ನು ಹಾಯಿಸುತ್ತೇವೆ. ಮಾನ್ಯ ಸುಬ್ಬಾರೆಡ್ಡಿಯವರು ಗಾಂಧೀಬಾಜಾರ್‌ನಲ್ಲಿ ಎಲ್ಲಾ ಒಡೆದುಹಾಕುತ್ತಿದ್ದಾರೆಂಬ ಗುಲ್ಲು ನಡೆದಿತ್ತೆಂದು ಹೇಳಿದರು. ಕೆಲವು ಸಮಯ ಈ ಗುಲ್ಲಿನಿದ ಶಾಸಕರಿಗೆ ನಿದ್ರಾಭಂಗವಾಗುತ್ತದೆ. ನಾನು ಮಾನ್ಯ ಸುಬ್ಬಾರೆಡ್ಡಿಯವರಿಗೆ ಹೇಳುತ್ತಿದ್ದೇನೆ, ಅಶೋಕ್‌ರವರಿಗೆ ಅಲ್ಲ. ನೀವು ಹೋಗಿ ನೋಡಿದಾಗ ನಿಮಗೆ ಗೊತ್ತಾಗುತ್ತದೆ. ಕಾರ್ಪೊರೇಷನ್‌ರವರು ಹೇಗೆ ಅನ್‌ಅಥಾರೈಸ್ಟ್ ಅಕ್ಯುಪೇಷನ್‌ನಿಂದ ಅದರಲ್ಲೂ ಸೈಡ್‌ಬಾಕ್ಸ್‌ನ್ನೆಲ್ಲ ತಮ್ಮದು ಮಾಡಿಕೊಂಡು ಸಾರ್ವಜನಿಕರಿಗೆ ಹೇಗೆ ಕಷ್ಟಕ್ಕೆ ಗುರಿ ಮಾಡುತ್ತಿದ್ದಾರೆನ್ನುವುದನ್ನು ಯೋಚನೆ ಮಾಡಿದಾಗ, ಕಾರ್ಪೊರೇಷನ್‌ದವರು ಮಾಡುತ್ತಿರುವುದು ಬಹಳ ಕಡಿಮೆಯೆಂದು ನಾನು ಭಾವನೆ ಮಾಡುತ್ತೇನೆ. ಅವರು ಇನ್ನು ಹೆಚ್ಚು ಶಕ್ತಿಶಾಲಿಯಾಗಿ ಕೆಲಸವನ್ನು ಮಾಡಬೇಕು. ಏಕೆಂದರೆ ಸರ್ಕಾರ ಮತ್ತು ವಿರೋಧಪಕ್ಷದವರು ಒಮ್ಮತದಲ್ಲಿ ಅವರಿಗೆ ನಾವು ತಿಳಿಸುತ್ತಿದ್ದೇವೆ. "put Bangalore back on the rails again."

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕಾರ್ಪೊರೇಷನ್ ಆಯುಕ್ತರಾದ ಜೈರಾಜ್‌ರವರು ಅದರ ಬಗ್ಗೆ ಬಹಳ ಆಳವಾಗಿ ಆಸಕ್ತಿ ವಹಿಸಿದ್ದರು. ಈಗ ಏಕೋ ಹಿಂದೆ ಹಿಂದೆ ಹೋಗುತ್ತಿದ್ದಾರೆ. ತಾವು ಹೇಳುವುದು ಕೋರ್ಟ್‌ಗೆ ಹೋಗಬಹುದಿತ್ತು ಕೋರ್ಟ್‌ಗೆ ಹೋಗುವುದಕ್ಕೆ ಗೊತ್ತೇ ಇಲ್ಲ. ಅವರು ಯಾರಿಗೂ ತಿಳಿಸುವುದಿಲ್ಲ. ಗೊತ್ತಿರುವವರು ಕೆಲವರು ಇದ್ದಾರೆ. ಕೆಲವರು ಕೋಟ್‌ರಗೆ ಹೋಗಿ ಸ್ಟೇ ತೆಗೆದು ಕೊಂಡಿದ್ದಾರೆ. ಕೆಲವರಿಗೆ ಏನೂ ಗೊತ್ತಿಲ್ಲ. Straightaway in the morning itself they will go and demolish.

SRI S.M. KRISHNA: They can claim for damages. They can sue the civic authorities. We take responsibility for that. Unless they are fortified with documentary support. ಈಗ ನನಗೆ ನಿಮಗೆ ಬಂದು ಏನು ಹೇಳುತ್ತಾರೆ ಅದೆಲ್ಲ we are looking at the human angle. As peoples' representatives we have to take that pasture. But law is blind. Therefore law will have to take its own course. Whether it is Bangalore. Mysore or anywhere else. ಎಲ್ಲಿ ಎನ್‌ಕ್ರೋಜ್‌ಮೆಂಟ್ಸ್ ಆಗಿದೆ, ಎಲ್ಲಿ ಅನ್‌ಅಥಾರೈಸ್ಡ್ ಅಕ್ಯುಪೇಷನ್ ಆಗಿದೆ ಅದನ್ನು ನಿಷ್ಕರುಣೆಯಿಂದ ಅವರನ್ನು ಎತ್ತಂಗಡಿ ಮಾಡಬೇಕು. ಆ ಎತ್ತಂಗಡಿ ಮಾಡಬೇಕೆನ್ನತಕ್ಕದ್ದು ಈ ಸದನಕ್ಕೆ ಒಟ್ಟಾರೆ ಸೂಚನೆಯನ್ನು ಅವೊಂದು ಆದೇಶವನ್ನು ತಾವು ಈ ದಿವಸ ಕೊಟ್ಟಿದ್ದೀರಿ. ಆ ದೃಷ್ಟಿಯಿಂದ ಇವತ್ತು ಏನು ಚರ್ಚೆಯನ್ನು ಮಾನ್ಯ ಸಿಂಧ್ಯಾರವರು ಪ್ರಾರಂಭ ಮಾಡಿದರು ಆ ಚರ್ಚೆಗೆ ಬಹಳ ಹೆಚ್ಚಿನ ಮಹತ್ವ ಸಿಕ್ಕಿದೆಯೆಂದು ನಾಲ್ಕು ಮಾತುಗಳನ್ನು ಸಭೆಯ ಮುಂದೆ ಹೇಳಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ.

ಅಧ್ಯಕ್ಷರು:- ಅನೇಕ ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಾಪರ್ಟಿನಲ್ಲಿ ರಾತ್ರೋ ರಾತ್ರಿ ದೇವಾಲಯಗಳನ್ನು ಕಟ್ಟುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ:- ಈ ದೇವಸ್ಥಾನಗಳೂ, ಮಸೀದಿಗಳು ಚರ್ಚ್‌ಗಳು ಇವುಗಳೆಲ್ಲವೂ ಕೂಡ ನಮ್ಮ ಜೀವನದ ಅಥವಾ ನಮ್ಮ ಸಮಾಜದ ಹಲವಾರು ಮುಖಗಳು. ನಾನು ನಗರಪ್ರದಕ್ಷಿಣೆಯನ್ನು ಎರಡನೆಯ ಸಾರಿ ಮಾಡುವಾಗ ರಾಜಾಜಿನಗರದ ಕಾರ್ಡ್ ರಸ್ತೆಯಲ್ಲಿ ಮಾನ್ಯ ಸುರೇಶ್‌ಕುಮಾರ್‌ರವರು ನನ್ನ ಜೊತೆಯಲ್ಲಿದ್ದರು. ಅವೊತ್ತು ನೋಡಿದೆ. ಇದ್ದಕ್ಕಿದ್ದಹಾಗೆ ಒಂದು ದೇವಸ್ಥಾನ ಬಂದಿತ್ತು. ಆಗ ನಾನು ಬಸ್ ನಿಲ್ಲಿಸಿ ನಾನು ಕಾರ್ಪೊರೇಷನ್ ಕಮೀಷ್‌ನರ್ ಮತ್ತು ಅವರ ಸಿಬ್ಬಂದಿಯವರಿಗೆ ಹೇಳಿದೆ. ಏಕೆಂದರೆ ದೇವಸ್ಥಾನವನ್ನು ಕಂಪ್ಲೀಟ್ ಆಗಿ ಮಾಡಿಬಿಟ್ಟು ಅಲ್ಲಿ ಒಂದು ವಿಗ್ರಹವನ್ನು ಸ್ಥಾಪನೆ ಮಾಡಿ ಆದಮೇಲೆ ಅವರನ್ನು ತಡೆಯುವುದು ಕಷ್ಟವಾಗುತ್ತದೆ. ಆದ್ದರಿಂದ ಈ ಸ್ಟೇಜ್‌ನಲ್ಲೆ ಅದನ್ನು ಮೊಟಕು ಮಾಡಿಯೆಂದು ಹೇಳಿದೆ. ಈ ದೇವಸ್ಥಾನಗಳ ಹಾವಳಿ ಬಹಳ ಆಗಿದೆ ಎನ್ನತಕ್ಕದ್ದನ್ನು ನಾನು ನೋಡಿದ್ದೇನೆ, ಕೇಳಿದ್ದೇನೆ. ಇದನ್ನು ತಪ್ಪಿಸಲಿಕ್ಕೆ ನಮ್ಮ ನಿಮ್ಮ ಮತ್ತು ಸದನದ ಬೆಂಬಲ ಬೇಕಾಗುತ್ತದೆ. ಕೆಲವೊಂದು ಸಮಯದಲ್ಲಿ ದೇವಸ್ಥಾನಗಳನ್ನು ಶಿಫ್ಟ್ ಮಾಡಿರತಕ್ಕ ನಿದರ್ಶನಗಳಿವೆ. ಅಲ್ಲಿ ಒಟ್ಟಾರೆ ಕಾನ್ಸಿಯೆಸ್‌ನೆಸ್ ಆ ಭಾಗದಲ್ಲಿ ಉಂಟಾದಾಗ ನಾವು ಅದನ್ನು ಮಾಡಿದ್ದೇವೆ. ಮಾನ್ಯ ಶ್ರೀನಿವಾಸಗೌಡರು ಹೇಳುತ್ತಿದ್ದರು, ಒಂದು ದೇವಸ್ಥಾನವನ್ನು ಬೇರೆ ಕಡೆದಗೆ ಸಾಗಿಸಿದ್ದೇವೆಂದು ಹೇಳಿ, ಆದ್ದರಿಂದ ತಾವು ಹೇಳತಕ್ಕದ್ದನ್ನು ಕೂಡ ಗಮನದಲ್ಲಿಟ್ಟುಕೊಳ್ಳುತ್ತೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು, ಕಾರ್ಪೊರೇಷನ್ ಕಮೀಷನ್‌ರವರು ಮತ್ತು ಇತರ ಸಂಘಸಂಸ್ಥೆಗಳವರು ಬೆಂಗಳೂರನ್ನು ಪುನರುಜ್ಜೀವನ ಗೊಳಿಸುವುದಕ್ಕೋಸ್ಕರ ಇದಕ್ಕೆ ಕಾಯಕಲ್ಪ ಮಾಡುವುದಕ್ಕೋಸ್ಕರ ಇದರಲ್ಲಿ ಒಂದು ಸ್ಯಾಂಕಿಟ್‌ಟಿಯನ್ನು ತರಲಿಕ್ಕೋಸ್ಕರ ಅವರು ತೆಗೆದುಕೊಂಡಿರತಕ್ಕ ಕ್ರಮಗಳ ಬಗ್ಗೆ ಸರ್ಕಾರ ವಿಶೇಷವಾಗಿ ಅವರನ್ನು ನಾವು ಕಮಾಂಡ್ ಮಾಡುತ್ತಿದ್ದೇವೆ ಎನ್ನತಕ್ಕ ಮಾತುಗಳನ್ನು ಹೇಳುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನನ್ನ ಲೆಟರ್ ಬಗ್ಗೆ ಹೇಳಿದರು. ಬಹಳ ಒಳ್ಳೆಯದು. ಈಗಲೂ ಕೂಡ ಮಾರೇನಹಳ್ಳಿ ಪಾರ್ಕ್‌ನಲ್ಲಿ ಕನ್‌ಸ್ಟ್ರಕ್ಷನ್ ನಡೆಯುತ್ತಿದೆ. ಅದರ ಬಗ್ಗೆ ಕಾರ್ಪೊರೇಷನ್‌ನವರು ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಪಾರ್ಕ್‌ನಲ್ಲಿ ಡೇ ಅಂಡ್ ನೈಟ್ ಕನ್‌ಸ್ಟ್ರಕ್ಷನ್ ನಡೆಯುತ್ತಿದೆ. ಪಾರ್ಕ್‌ನಲ್ಲಿ ಅನ್ ಅಥಾರೈಸ್ಡ್ ಆಗಿ ಕನ್‌ಸ್ಟ್ರಕ್ಷನ್ ನಡೆಯುತ್ತಿದೆ. ಇದುವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಅಧ್ಯಕ್ಷರು:- ರಿಂಗ್‌ರೋಡ್ ವಿಷಯ ಅದು ಬಹಳ ಅಡ್ಡಾದಿಡ್ಡಿಯಾಗಿದೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):- ಒಂದು ಸಾರಿ ಒಂದು ರೋಡನ್ನು ಅಲೈನ್‌ಮೆಂಟ್ ಮಾಡಿದಮೇಲೆ ಅದನ್ನು ಬದಲಾಯಿಸುವುದು ಎಷ್ಟು ಕಷ್ಟ ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ಆದ್ದರಿಂದ ರಿಂಗ್ ರೋಡ್‌ನ್ನು ಮಾಡಿದ ಕಾಲ ಯಾವಾಗಲೋ ಗೊತ್ತಿಲ್ಲ. ಬಹುಶಃ ಏಳೆಂಟು ವರ್ಷಗಳ ಕೆಳಗೆ ಇರಬಹುದು. ಇವತ್ತು ರಿಂಗ್‌ರೋಡಿನ ಕೆಲಸ ಬಹಳ ಅಗತ್ಯವಾಗಿ, ಜರೂರಾಗಿ, ಬೆಂಗಳೂರಿನ ಟ್ರಾಫಿಕ್‌ನ್ನು ಡೈವರ್ಟ್, ಮಾಡತಕ್ಕಂಥ ಉದ್ದೇಶದಿಂದ ಮಾಡಲೇಬೇಕಾಗಿರತಕ್ಕಂಥ ಕೆಲಸ. ಸುಮಾರು 36 ಕಿಲೋಮೀಟರ್‌ನಷ್ಟು ಈ ಕೆಲಸವನ್ನು ಜೂನ್‌ನಲ್ಲಿ ಮುಗಿಸುತ್ತೇವೆಂದು ಹೇಳಿದ್ದೇವೆ. ಇವತ್ತು ಮತ್ತೆ ಈ ಸದನದಲ್ಲಿ ನಾನು ಪ್ರತಿಪಾದನೆ ಮಾಡುತ್ತಿದ್ದೇನೆ ಏನೆಂದರೆ ಜೂನ್‌ಗೆ ಇದು ಮುಗಿಯುತ್ತದೆ ಎನ್ನತಕ್ಕಂಥ ಆತ್ಮವಿಶ್ವಾಸ ನನಗೆ ಇದೆ.

ಆದ್ದರಿಂದ ಇವತ್ತು ನಾವು ಆ ಅಲೈನ್‌ಮೆಂಟ್ ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ಅದಕ್ಕೆ ಪರ್ಯಾಯವನ್ನು, ಪರಿಹಾರವನ್ನು ಕಂಡುಹಿಡಿಯಬೇಕು. ಇದು ಡೆತ್ ಟ್ರ್ಯಾಪ್ ಎಂದು ಅವರು ಹೇಳಿದ್ದಾರೆ........

ಅಧ್ಯಕ್ಷರು:- ಸಡನ್ ಕರ್ವ್ ಬಂದು ಬಿಡುತ್ತದೆ.

ಶ್ರೀ ಎಸ್.ಎಂ.ಕೃಷ್ಣ:- ನಿಜ ಅದರ ಬಗ್ಗೆ ವಿಶೇಷವಾದಂಥ ಗಮನವನ್ನು ನಮ್ಮ ಅಧಿಕಾರಿಗಳು ಕೊಡುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ :- ಮಾನ್ಯ ಅಧ್ಯಕ್ಷರು ತಿಳಿಸಿದ ಹಾಗೆ ಆ ಕರ್ವ್ ಅನ್ನು ಈಸ್ ಆಪ್ ಮಾಡುವುದಕ್ಕೆ ಸಾಧ್ಯವಿದೆ. ಅಧ್ಯಕ್ಷರು ನನಗೆ ಹೆಚ್ಚಿನ ಸಮಯ ಕೊಟ್ಟಿದ್ದರೆ ಅದು ಹೇಗೆ ಆಗುತ್ತದೆ ಎಂದು ಹೇಳುತ್ತಿದೆ. ಆದರೆ ನನಗೆ ಹೆಚ್ಚು ಸಮಯ ಕೊಡದೇ ಇದ್ದುದರಿಂದ ನಾನು ಹೇಳಲಿಲ್ಲ. ಅದು ಕರ್ವ್ ಏಕೆ ಆಯಿತು ಎಂದರೆ ಪಕ್ಕದಲ್ಲಿ ಇರತಕ್ಕಂಥ ಜಮೀನು ಇರುತ್ತದಲ್ಲ, ಅದನ್ನು ರಸ್ತೆಗೋಸ್ಕರ ಅಕ್ವೈರ್ ಮಾಡತಕ್ಕಂಥ ಸಂದರ್ಭದಲ್ಲಿ ಆ ಜಮೀನಿನವರು ಅಧಿಕಾರಿಗಳ ಕೈ ಬೆಚ್ಚಗೆ ಮಾಡಿರುತ್ತಾರೆ. ಆದಕಾರಣ ಇದನ್ನೆಲ್ಲ ಅವರು ಕೈ ಬಿಟ್ಟಿರುತ್ತಾರೆ ಅಥವಾ ಡಿ-ನೋಟಿಫಿಕೇಶನ್ ಮಾಡಿರುತ್ತಾರೆ. ಇದು ಬಹಳ ಕಡೆ ಇಲ್ಲ. ಕೆಲವು ಕಡೆ ಮಾತ್ರ ಇದು ಇರತಕ್ಕಂಥಾದ್ದು. ಆದ್ದರಿಂದ ಹಣ ಹೆಚ್ಚಿಗೆ ಖರ್ಚಾದರೂ ಚಿಂತೆ ಇಲ್ಲ. ಈ ಕರ್ವ್‌ನ್ನು ಈಸ್ ಆಫ್ ಮಾಡಬೇಕು ಎನ್ನತಕ್ಕಂಥಾದ್ದು. ನಮ್ಮ ರೋಡ್ ಕನ್‌ಸ್ಟ್ರಕ್ಷನ್ ಪ್ರಿನ್ಸಿಪಲ್ಸ್ ಏನಿವೆ ಅದನ್ನೆಲ್ಲ ಅಲ್ಲಿ ಕಿಂಚಿತ್ತೂ ಪಾಲನೆ ಮಾಡಿಲ್ಲ. ಅನ್ಯಾಯವಾಗಿ ದಿನಾ ಅಕ್ಸಿಡೆಂಟ್‌ನಲ್ಲಿ ಜನರೂ ಸಾಯುತ್ತಿದ್ದಾರೆ. ಆದ್ದರಿಂದ ಈ ಕರ್ವ್‌ಗಳನ್ನು ಈಸ್ ಆಫ್ ಮಾಡುವುದಕ್ಕೆ ಹಣ ಹೆಚ್ಚು ಖರ್ಚಾದರೂ ಚಿಂತೆ ಇಲ್ಲ, ಇದನ್ನು ಮಾಡಬೇಕು ದಯವಿಟ್ಟು ಇಷ್ಟು ಮಾಡಿಸಿ. ಆ ಮೇಲೆ ಬಾಣಸವಾಡಿ ಕೆರೆಯ ಅರ್ಧರ್ದ ಭಾಗದಲ್ಲಿ ಬೇಲಿ ಹಾಕಿದ್ದಾರೆ. ಅದು ಯಾರು ಹಾಕಿದ್ದಾರೆ, ಏಕೆ ಹಾಕಿದ್ದಾರೆಂದು ನನಗಂತೂ ಗೊತ್ತಿಲ್ಲ. ಹೋಗುತ್ತಾ ಬರುತ್ತಾ ನಾನು ನೋಡುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ:- ಈ ಎರಡು ವಿಚಾರಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಗಮಹರಿಸಲು ಹೇಳುತ್ತೇನೆ. ಈ ಕೆರೆ ಒತ್ತುವರಿ ಬಗ್ಗೆ ಕಾನೂನು ತನ್ನ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಾನು ತಮಗೆ ಭರವಸೆಯನ್ನು ಕೊಡುತ್ತೇನೆ. ಈ ಬಾಣಸವಾಡಿ ರಸ್ತೆಯ ಶಾರ್ಪ ಕರ್ವ್ಸ್ ಏನಿದೆ, ಅದನ್ನು ಸ್ಟ್ರೈಟನ್ ಮಾಡುವುದಕ್ಕೆ ನಾನು ಆದೇಶವನ್ನು ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು :- ಇದು ಮುಗಿದೆಯಲ್ಲ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಹಲವಾರು ವಿಚಾರಗಳಲ್ಲಿ ನಮಗದು ಕನ್ವಿನ್ಸಿಂಗ್ ಆಗಿದೆ. ಅದನ್ನು ನಾವು ಸಹಿತ ಮೆಚ್ಚಿದ್ದೇವೆ. ಆಗ ನಮಗೊಂದು ಭರವಸೆ ಬೇಕು. ಸಿ.ಎ.ಸೈಟುಗಳನ್ನು ಪಾರ್ಕ್‌ಗಳನ್ನು ಮತ್ತು ಕಮರ್ಶಿಯಲ್ ಬಿಲ್ಡಿಂಗ್ ಸೈಟುಗಳನ್ನು ಏನು ಡೆಮಾಲಿಶ್ ಮಾಡಿದ್ದಾರೆ, ಅದನ್ನು

ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ ಎನ್ನುವುದು ಇಂಡುವಿಜ್ಯುಯಲ್ ಕೇಸುಗಳನ್ನು ಐದುನೂರಲ್ಲ ಸಾವಿರ ಬೇಕಾದರೂ ನಾವು ತಮ್ಮ ಗಮನಕ್ಕೆ ತರುತ್ತೇವೆ. ಬೇಕಾದರೆ ರ್‍ಯಾಂಡಮ್ ಆಗಿ ತೆಗೆದುಕೊಳ್ಳಿ. ಇಲ್ಲೂ ಸಹಿತ 25 ವರ್ಷಗಳಿಂದ ಅವರು ಇದ್ದಾರೆ, 30X40 ಸೈಟುಗಳಲ್ಲಿ ಇದ್ದಾರೆ. 8 ಲಕ್ಷ- 10ಲಕ್ಷ ರೂಪಾಯಿ ಖರ್ಚುಮಾಡಿಕೊಂಡು, ಸಾಲಗಳನ್ನು ತೆಗೆದುಕೊಂಡು ಅನೇಕರು ಆರ್.ಸಿ.ಸಿ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ನನಗೆ ತಿಳಿದಹಾಗೆ ಸಂಬಂಧಪಟ್ಟ ಮೇಲಾಧಿಕಾರಿಗಳು ಆರ್.ಸಿ.ಸಿ. ಬಿಲ್ಡಿಂಗ್‌ಗಳನ್ನು ಒಡೆದುಹಾಕಿಬಿಡಿ ಎನ್ನತಕ್ಕಂಥ ಸೂಚನೆಯನ್ನು ಕೊಟ್ಟಿರತಕ್ಕಂಥಾದ್ದು ನಮ್ಮ ತಿಳುವಳಿಕೆಗೆ ಬಂದಿದೆ. ಇವತ್ತು ಜನ ಭಯಗ್ರಸ್ತರಾಗಿದ್ದಾರೆ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ತಾವು ಕೊಡಬೇಕೆಂದು ಹೇಳಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಎಲ್ಲಿಯವರೆಗೆ ತಾವು ಹೇಳತಕ್ಕಂಥ ಮನೆಗಳು ಪಾರ್ಕ್ ನಿವೇಶನಗಳು, ನಾಗರೀಕ ಸೌಲಭ್ಯದ ನಿವೇಶನಗಳು ಈ ಚೌಕಟ್ಟಿಗೆ ಬರುವುದಿಲ್ಲ, ಅವರು ನಿರಾಳವಾಗಿ ನಿದ್ರೆ ಮಾಡಬಹುದು.

ಶ್ರೀ ಆರ್. ಅಶೋಕ್ : ಸಾಕಷ್ಟು ಕಷ್ಟ ಇರುವುದು ನನಗೆ. ಏಕೆಂದರೆ ಮಾನ್ಯ ಸಿಂಧ್ಯರವರು ವಾಸ ಮಾಡುವುದು ಅಲ್ಲೇ. ಅದೇ ಏರಿಯಾದಲ್ಲಿ ಅವರು ವಾಸ ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಇದು ತಪ್ಪು ತಿಳುವಳಿಕೆ ಬರಬಾರದು. ನಾನೂ ಇಂತಹ ನಿವೇಶನದಲ್ಲಿ ಇದ್ದೇನೆ ಎನ್ನತಕ್ಕಂಥ ಅಭಿಪ್ರಾಯ ಬರುತ್ತಿದೆ. ಅದು ಹಾಗೆ ಇಲ್ಲ. 1983ರಲ್ಲಿ ಬಿ.ಡಿ.ಎ. ನವರು ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ, ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡು ಇದ್ದೇನೆ.

ಶ್ರೀ ಆರ್. ಅಶೋಕ್: ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ವಿವರವಾಗಿ ವಿಷಯದ ಬಗ್ಗೆ ಹೇಳಿದ್ದಾರೆ. ಆದರೆ ಯಾರು ಇವತ್ತು ಮನೆಗಳನ್ನು ಅಲ್ಲಿ ಕಟ್ಟಿಕೊಂಡಿದ್ದಾರೆ. ಯಾರು ಅಲ್ಲಿ ವಾಸ ಮಾಡುತ್ತಿದ್ದಾರೆ ಅವರಿಗೆ ಒಂದು ಆಶ್ವಾಸನೆ ಇಲ್ಲಿಂದ ಹೋಗಬೇಕು. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬಿ.ಡಿ.ಎ.ಗೆ ಅರ್ಜಿಹಾಕಿದವರ ಗತಿ ಏನು ಎಂದು ಹೇಳಿದ್ದಾರೆ. ನಾನು ಹೇಳುತ್ತಿರುವುದು ಬಿ.ಡಿ.ಎ.ಗೆ ಹತ್ತು - ಹದಿನೈದು ಬಾರಿ ಅರ್ಜಿಹಾಕಿ ವಿಫಲರಾಗಿ ಕೊನೆಗೆ ರೆವಿನ್ಯೂ ಸೈಟುಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಂಡಿರುವವರ ಬಗ್ಗೆ ಅವರು ಅರ್ಜಿ ಹಾಕಿದ್ದಾರೆ. ಆದರೆ ಹತ್ತು ಬಾರಿ ಅರ್ಜಿ ಹಾಕಿದರೂ ವಿಫಲರಾಗಿ, ಬಿ.ಡಿ.ಎ. ಯಿಂದ ಸೈಟು ಸಿಗದೇ ಇರುವ ಕಾರಣಕ್ಕೆ ರೆವಿನ್ಯೂ ಸೈಟುಗಳನ್ನು ತೆಗೆದುಕೊಂಡಿದ್ದಾರೆ . ಬಿ.ಡಿ.ಎ. ನವರು 25 ವರ್ಷಗಳಿಂದ ಸರಿಯಾಗಿ ಕಾಲಕಾಲಕ್ಕೆ ತಕ್ಕಂತೆ ಸೈಟುಗಳನ್ನು ಹಂಚಿಕೊಂಡು ಬಂದಿದ್ದರೆ ಈ ರೆವಿನ್ಯೂ ಸೈಟುಗಳ ಬಡಾವಣೆ ಬರುತ್ತಿರಲಿಲ್ಲ, ಯಾರೂ ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ಹೋಗುತ್ತಿರಲಿಲ್ಲ. ಯಾವಾಗ ನಮಗೆ ಸಾಕಷ್ಟುಜಾಗ ಸಿಗುವುದಿಲ್ಲ ಆಗ ಸಮಸ್ಯೆ ಬರುತ್ತದೆ. ಮನುಷ್ಯನಿಗೆ ಮುಖ್ಯವಾಗಿ ಏನು ಬೆಕು? ಕುಡಿಯುವುದಕ್ಕೆ ನೀರು ಬೇಕು, ಬಟ್ಟೆಬೇಕು. ಅದು ಬಿಟ್ಟರೆ ವಾಸಕ್ಕೆ ಮನೆ ಬೇಕು. ನಾವು ಒಂದು ಮನೆಯನ್ನು ಕಟ್ಟಿಕೊಳ್ಳಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಆದ್ದರಿಂದ ಬಿ.ಡಿ.ಎ. ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲವಾದಾಗ ಜನರು ರೆವಿನ್ಯೂಸೈಟುಗಳಿಗೆ ಹೋಗಿದ್ದಾರೆ. ಬೇರೆ ಕಾರಣಕ್ಕೆ ಆಸೆ ಬಿದ್ದು ಅವರು ಹೋಗಿಲ್ಲ.

ಬಿ.ಡಿ.ಎ. ಯಿಂದ ಸೈಟು ಸಿಗಲಿ ಎಂದು ಆಸೆ ಜನರಿಗೆ ಈಗಲೂ ಇದೆ. ಆದರೆ ಬಿ.ಡಿ.ಎ. ಕೈಯಲ್ಲಿ ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ಆಗಿಲ್ಲ. ಅದಕ್ಕೋಸ್ಕರ ಜನರು ರೆವಿನ್ಯೂ ಸೈಟಿಗೆ ಹೋಗಿದ್ದಾರೆ. ಆ ಕಾರಣಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮತ್ತೆ ಬಿ.ಡಿ.ಎ. ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಹೇಳುತ್ತಿದ್ದೀರಿ.

ಅಧ್ಯಕ್ಷರು : ಡೆಮಾಲಿಶ್ ಬಗ್ಗೆ ಒಂದೇ ಇಶ್ಯು ನಮ್ಮ ಮುಂದೆ ಬರುವುದು. ಅದರ ಬಗ್ಗೆ ಹೇಳಿ.

ಶ್ರೀ ಆರ್. ಅಶೋಕ್: ಅದೇ ಇಶ್ಯು ಬಗ್ಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಬಿ.ಡಿ.ಎ. ಚರಿತ್ರೆಗೆ ನೀವು ಹೋಗಬೇಡಿ.

ಶ್ರೀ ಆರ್. ಅಶೋಕ್: ಮಾನ್ಯ ಮುಖ್ಯಮಂತ್ರಿಗಳು ಬಿ.ಡಿ.ಎ. ಬಗ್ಗೆ ಪ್ರಶಂಸೆ ಮಾಡಿದರು. ಸಿ.ಎ. ಸೈಟುಗಳ ಬಗ್ಗೆ, ಆಟದ ಮೈದಾನಗಳ ಬಗ್ಗೆ, ಪಾರ್ಕು, ಕೆರೆಗಳ ಬಗ್ಗೆ ನಿಜವಾಗಿಯೂ ನಾವು ಗಮನಿಸಬೇಕು. ಸಾರ್ವಜನಿಕರು ಅದರ ಜತೆಯಲ್ಲಿ ಇರುತ್ತಾರೆ. ಈಗ ಮಾನ್ಯ ಬೈರೇಗೌಡರು ಹೇಳಿದರು. ಯಾರೋ ಕಟ್ಟಿದ್ದನ್ನು ಹುಡುಗರೇ ಒಡೆದು ಹಾಕಿದ್ದಾರೆ ಎಂದು. ಪಾರ್ಕ್‌ನಲ್ಲಿ ಕೆರೆಯಲ್ಲಿ ಕಟ್ಟಿರುವುದನ್ನು ನೋಡಿ ಜನರು ಸುಮ್ಮನಿರುವುದಿಲ್ಲ. ಆದರೆ ಈ ಲ್ಯಾಂಡ್ ಗ್ರ್ಯಾಬರ್ಸ್ ಯಾರಿದ್ದಾರೆ., ಯಶವಂತಪುರ ಹೋಬಳಿಯಲ್ಲಿ ಗೆಳೆಯರ ಬಳಗ ಎಂದು ಸೈಟುಗಳನ್ನು ಮಾಡಿದ್ದಾರೆ.. ಬಿ.ಡಿ.ಎ. ಪರ್ಮಿಶನ್ ಇಲ್ಲ, ಲೇಔಟ್ ಅಪ್ರೂವಲ್ ಇಲ್ಲ. ಬಿ.ಡಿ.ಎ.ನವರು ನೋಟಿಸ್ ಕೊಟ್ಟಿದ್ದಾರೆ ಮೂರು ಕೋಟಿ ರೂಪಾಯಿ ಕಟ್ಟಬೇಕು ಎಂದು. ಅವರು ಅದನ್ನು ಕೂಡ ಕಟ್ಟಿಲ್ಲ. ಚಿಕ್ಕಬಾಣಾವರ ಪಂಚಾಯ್ತಿಯಲಿ ಒಬ್ಬ ಸೆಕ್ರೆಟರಿ, ಅವರು ಬಹಳ ಸ್ಟ್ರಿಕ್ಟ್ ಆಗಿದ್ದರು. ಅವಳಿಗೆ ಹತ್ತು ದಿವಸ ಲೀವ್ ಹಾಕಿಸಿದರು. ಪಕ್ಕದ ಸೆಕ್ರೆಟರಿಯನ್ನು ಕರೆದುಕೊಂಡು ಬಂದು ಅಲ್ಲಿ ಕೂರಿಸಿ 20 ಲಕ್ಷ ರೂಪಾಯಿ ಕೊಟ್ಟು ಒಂದೇ ದಿನಕ್ಕೆ ಖಾತೆ ಮಾಡಿಸಿಬಿಟ್ಟರು. ಬಿ.ಡಿ.ಎ. ಅಪ್ರೂವಲ್ ಇಲ್ಲ, ಯಾವುದೇ ಬೆಟರ್‌ಮೆಂಟ್ ಚಾರ್ಜ್‌ಸ್ ಕಟ್ಟಿಲ್ಲ. ಈ ಗೆಳೆಯರ ಬಳಗದ ಬಗ್ಗೆ ಬಿ.ಡಿ.ಎ. ಯವರು ಏನು ಮಾಡುತ್ತಿದ್ದಾರೆ ? ಇದೇ ರೀತಿ ಪಟ್ಟಣಗೆರೆಯಲ್ಲಿ ಒಂಭೈನೂರು ಸೈಟುಗಳನ್ನು ಮಾಡಿದ್ದಾರೆ. ಸ್ಟ್ರೀಟ್‌ಲೈಟ್ ಕೊಟ್ಟಿದ್ದಾರೆ, ರಸ್ತೆಗಳಲಿಗೆ ಟಾರ್ ಹಾಕಿದ್ದಾರೆ ಮತ್ತು ಎಲ್ಲ ರೀತಿಯ ಸೌಲಭ್ಯಗಳನ್ನೂ ಕೊಟ್ಟಿದ್ದಾರೆ, ರಸ್ತೆಗಳಿಗೆ ಟಾರ್ ಹಾಕಿದ್ದಾರೆ ಮತ್ತು ಎಲ್ಲ ರಿತಿಯ ಸೌಲಭ್ಯಗಳನ್ನೂ ಕೊಟ್ಟಿದ್ದಾರೆ. ಅವರ ಕಡೆಗೆ ಏಕೆ ಬಿ.ಡಿ.ಎ. ಗಮನಹರಿಸುವುದಿಲ್ಲ? ಇಲ್ಲಿ ಪಾಪ, ಬಡವರು ಯಾರು ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವುಗಳನ್ನು ನೀವು ಒಡೆಯುವುದಕ್ಕೆ ಹೋಗುತ್ತಿದ್ದೀರಿ. ಅಲ್ಲಿ ಇಡೀ ಬೆಂಗಳೂರಿಗೆ ಕಾಣಿಸುವಂತೆ ಒಂಭೈನೂರು ಸೈಟುಗಳನ್ನು ಮಾಡಿದ್ದಾರೆ. ಅವುಗಳನ್ನು ನಾಲ್ಕು-ನಾಲ್ಕು ಲಕ್ಷ ರೂಪಾಯಿಗೆ ಒಂದೊಂದು ಸೈಟುಮಾಡಿ ಮಾರಾಟ ಮಾಡುತ್ತಿದ್ದಾರೆ. ಅವರ ಬಗ್ಗೆ ಏಕೆ ಬಿ.ಡಿ.ಎ. ಗಮನಹರಿಸುವುದಿಲ್ಲ? ಅನಧಿಕೃತ ನಿರ್ಮಾಣಗಳನ್ನು ತಡೆಯಬೇಕೆಂದು ನೀವೇನು ಹೇಳುತ್ತಿದ್ದೀರಲ್ಲ, ಇವರು ಯಾರು ಅನಧಿಕೃತವಾಗಿ ಮಾಡುತ್ತಿದ್ದಾರೆ, ಅವರು ಬಿ.ಡಿ.ಎ.ಗೆ 5 ಕೋಟಿ-6ಕೋಟಿ ರೂಪಾಯಿಗಳನ್ನು ಕೊಡಬೇಕು. ಅವರ ಬಗ್ಗೆಯೂ ಕೂಡ ಗಮನಹರಿಸಬೇಕಲ್ಲ? ಯಾರೋ ಒಂದು ಎಕರೆಯಲ್ಲಿ ಎಲ್ಲೋ ಮಾಡುತ್ತಾರೆ ಎಂದರೆ ಗೊತ್ತಾಗುವುದಿಲ್ಲ ಎಂದು ಹೇಳಬಹುದು. ನಾನು ಹೇಳುತ್ತಾ ಇರುವುದು 50-6- ಎಕರೆ ಜಾಗದಲ್ಲಿ ಹೀಗೆ ಮಾಡುತ್ತಿರುವುದರ ಬಗ್ಗೆ. ಈ ಭಾರತ್ ಹೌಸಿಂಗ್ ಕೋಪರೇಟಿವ್ ಸೊಸೈಟಿ ಎಂದು ಇದೆ.

ಅಲ್ಲಿ 30 ಎಕರೆ ಸರ್ಕಾರಿ ಜಮೀನು ಇದೆ. ಸುತ್ತಲೂ ಅವರು ಲೇಔಟ್ ಮಾಡಿಬಿಟ್ಟಿದ್ದಾರೆ. ಅಲ್ಲಿಯೂ ಕೂಡ ಒಂಭೈನೂರು ಸೈಟುಗಳನ್ನು ಮಾಡಿ ಹಂಚಿದ್ದಾರೆ. ಇದರ ಬಗ್ಗೆ ಏಕೆ ಬಿ.ಡಿ.ಎ. ಗಮನಹರಿಸುವುದಿಲ್ಲ? ನಾನು ಹೇಳುವುದು ಏನೆಂದರೆ ಬಿ.ಡಿ.ಎ.ಯವರು ಎಲ್ಲಿ ಆಸಕ್ತಿ ವಹಿಸಬೇಕು? ಯಾವುದರ ಬಗ್ಗೆ ಜಾಸ್ತಿ ಕಾಳಜಿ ವಹಿಸಬೇಕು ಅದರ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಪಾಪ, ಯಾರು ಬಡವರು, ಅಮಾಯಕರು ಇದ್ದಾರೆ ' ಮಾರಿಕಣ್ಣು ಹೋರಿ ಮ್ಯಾಲೆ ' ಎನ್ನುವಂತೆ ಅವರಿಗೆ ತೊಂದರೆ ಕೊಡುತ್ತಿದ್ದಾರೆ . ಪಾಪ, ಯಾರೋ ಕುರಿಗಳು ಸಿಗುತ್ತಾರೆ, ಅಮಯಕರು ಸಿಗುತ್ತಾರೆ ಅವರ ಮೇಲೆ ಪರಾಕ್ರಮ ತೋರಿಸುವುದಲ್ಲ. ಅದರ ಬದಲು ಹುಲಿ, ಚಿರತೆಗಳ ಮೇಲೆ ಹೋದರೆ ಸ್ವಲ್ಪ ಬಿ.ಡಿ.ಎ.ಯವರಿಗೆ ಗೊತ್ತಾಗುತ್ತದೆ ಏನು ಎನ್ನುವುದು. ಮೊದಲು ಅಂಥವರ ಮೇಲೆ ಹೋಗಿ ಆಮೇಲೆ ಬಡವರ ಬಗ್ಗೆ ಬನ್ನಿ. ಇಷ್ಟು ಹೇಳಿ ಇವತ್ತು ಯಾರು ನಿಜವಾಗಿ ಬಡವರು ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಡಬೇಕು. ಬಡವರು ಯಾರು ಆರ್.ಸಿ.ಸಿ.ಮನೆಗಳನ್ನು ಕಟ್ಟಿಕೊಂಡಿದ್ದಾರೆ ಇವರಿಗೆ ಅವಕಾಶ ಮಾಡಿಕೊಡಬೇಕು ಎನ್ನುವ ಮನವಿಯನ್ನು ತಮ್ಮ ಮುಖಾಂತರ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಕೆಲವು ನಿದರ್ಶನಗಳನ್ನು ತಾವೇನು ಕೊಟ್ಟಿದ್ದೀರಿ ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಬಿ.ಡಿ.ಎ. ನವರು ಈಗಾಗಲೇ 3,500 ಸೈಟುಗಳನ್ನು ಬಡತನ ರೇಖೆಯಿಂದ ಕೆಳಗಡೆ ಇರತಕ್ಕಂಥವರಿಗೆ ಕೊಟ್ಟಿದ್ದಾರೆ. ಇದು ಪ್ರಶಂಸನಾರ್ಹವಾದ ಕಾರ್ಯವನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಮತ್ತೊಮ್ಮೆ ನಾನು ಹೇಳುತ್ತೇನೆ.

ಅಧ್ಯಕ್ಷರು: ಇನ್ನು ಸಾಕು ಮಾಡೋಣ, ಈ ವಿಷಯವನ್ನು ಸನ್ಮಾನ್ಯ ಸದಸ್ಯರ ಹಾಗೂ ಸರ್ಕಾರದ ಅಭೀಪ್ರಾಯಗಳನ್ನು ನಾನು ಆಲಿಸಿದ್ದೇನೆ. ಈ ವಿಷಯ ನಿಲುವಳಿ ಸೂಚನೆ ಮೂಲಕ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವಾದ ವಿಷಯ ಆಗಿರದ ಕಾರಣ ನಿಲುವಳಿ ಸೂಚನೆ ಮೂಲಕ ಚರ್ಚಿಸಲು ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ ಮತ್ತು ಅಲ್ಲಿ ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಆದ್ದರಿಂದ ಈಗ ಸಭೆಯನ್ನು ಮುಂದೂಡಲಾಗಿದ್ದು ಪುನಃ ಎರಡೂಮುಕ್ಕಾಲು ಗಂಟೆಗೆ ಸೇರೋಣ.

(1ಗಂಟೆ 39ನಿಮಿಷಕ್ಕೆ ಸದನ ಮುಕ್ತಾಯಗೊಂಡು ಪುನಃ2 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಲಾಯಿತು).

(ಸಭೆಯು ಮತ್ತೆ 3-20ಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪನವರು ಪೀಠವನ್ನು ಅಲಂಕರಿಸಿದರು.)

ಆ) ಗ್ರಾಮ ಪಂಚಾಯಿತಿ ಚುನಾವಣೆ ನಡೆದ ಮೇಲೆ ರಾಜ್ಯ ಕೆಲವು ಕಡೆಗಳಲ್ಲಿ ಗಲಭೆ ನಡೆಯುತ್ತಿರುವ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಜೊತೆ ಮಾತನಾಡಿದ ರೀತಿಯಲ್ಲಿ ನಾಳೆ ಬೆಳಿಗ್ಗೆ ಅದನ್ನು ಪ್ರಸ್ತಾಪ ಮಾಡುವುದರ ಮುಖಾಂತರ ಅದರ ಬಗ್ಗೆ ಸನ್ಮಾನ್ಯ